# ಯೂನಿವರ್ಸಲ್ ಕೋಚಿಂಗ್ ಸೆಂಟರ್

## PSI ನ ಸಂಭವನೀಯ ಪ್ರಬಂಧಗಳು

## ಕನ್ನಡ ಪ್ರಬಂಧಗಳು

### 1. ಪಶ್ಚಿಮಘಟ್ಟ ಮತ್ತು ಜೀವವೈವಿಧ್ಯ ರಕ್ಷಣೆ

ಪಶ್ಚಿಮಘಟ್ಟ ಏಷ್ಯಾದಲ್ಲೇ ಅತ್ಯಂತ ಪ್ರಶಸ್ತ ಜೀವವೈವಿಧ್ಯ ತಾಣ. ಇದಕ್ಕೆ ಸಹ್ಯಾದ್ರಿ ಪರ್ವತ ಎಂಬ ಹೆಸರೂ ಇದೆ. ಮಹಾರಾಷ್ಟ್ರ– ಗುಜರಾತ್‌ಗಳ ಗಡಿಪ್ರದೇಶದಲ್ಲಿ ತಪತಿ ನದಿಯಿಂದ ಆರಂಭವಾಗಿ ದಕ್ಷಿಣದಲ್ಲಿ ಕನ್ಯಾಕುಮಾರಿ ವರೆಗೂ ಹಬ್ಬಿದೆ. ಒಟ್ಟು 1600 ಕಿಲೋಮೀಟರ್ ಉದ್ದದ ಪರ್ವತಶ್ರೇಣಿ ಐದು ರಾಜ್ಯಗಳಲ್ಲಿ ಹಬ್ಬಿದೆ. ಆದರೆ ಒಟ್ಟುಶ್ರೇಣಿಯ ಅರ್ಧಕ್ಕಿಂತ ಹೆಚ್ಚು ಭಾಗ ಕರ್ನಾಟಕದಲ್ಲೇ ಇದ್ದು, 60 ಸಾವಿರ ಚದರ ಕಿಲೋಮೀಟರ್ ವ್ಯಾಪಿಸಿದೆ. ಇಲ್ಲಿಂದ ಹೊರಡುವ ನದಿಗಳು ದೇಶದ ಶೇಕಡ 40ರಷ್ಟು ಜಲಾನಯನ ಪ್ರದೇಶವನ್ನು ಆವರಿಸಿದೆ. ವಿಶ್ವದ ಅತ್ಯುನ್ನತ ಜೀವವೈವಿಧ್ಯ ನೆಲೆಯಾಗಿರುವ ಪಶ್ಚಿಮಘಟ್ಟದಲ್ಲಿ 5 ಸಾವಿರ ತಳಿಯ ಗಿಡಮರಗಳಿವೆ. 139 ಬಗೆಯ ಸಸ್ತನಿಗಳು, 508 ವಿಧದ ಪಕ್ಷಿಸಂಕುಲ, 179 ಪ್ರಕಾರದ ದ್ವಿಚರಿಗಳ ಬೆಲೆ. ವಿಶ್ವದಲ್ಲಿ ಅಳಿವಿನಂಚಿನಲ್ಲಿರುವ 326 ತಳಿಗಳು ಈ ಪ್ರದೇಶದಲ್ಲಿವೆ. ಬಂಗಾಳಕೊಲ್ಲಿ ಸೇರುವ ತಾಮ್ರಪರ್ಣಿ, ಗೋದಾವರಿ, ಕೃಷ್ಣಾ, ಕಾವೇರಿ, ಪಶ್ಚಿಮಾಭಿಮುಖವಾಗಿ ಹರಿಯುವ ಮಾಂಡವಿ, ಜವಾರಿ, ಶರಾವತಿ, ನೇತ್ರಾವತಿದಂಥ ನದಿಗಳ ಉಗಮಸ್ಥಾನ. ಹಲವು ಜಲವಿದ್ಯುತ್ ಯೋಜನೆಗಳ ನೆಲೆ. ಆಕರ್ಷಕ ಜಲಪಾತಗಳ ಖಣಿ.

ದಟ್ಟ ಕಾಡುಗಳಿಂದ ಕೂಡಿದ ದುರ್ಗಮ ಪ್ರದೇಶದಲ್ಲಿ ಮೊದಲು ಕೃಷಿ ಚಟುವಟಿಕೆ ಇರಲಿಲ್ಲ. ಆದರೆ ಬ್ರಿಟಿಷರ ಆಗಮನದ ನಂತರ ವಾಣಿಜ್ಯ ಬೆಳೆಗಳಿಗಾಗಿ ಕಾಡು ಕಡಿದು ಇಡೀ ಪ್ರದೇಶ ಬದಲಾಯಿತು. ಇಂಥ ಭವ್ಯ, ರಮ್ಯ ಸುಂದರ ತಾಣವನ್ನು ಕಾಪಾಡಲು ಸರ್ಕಾರ ಹಲವು ಯೋಜನೆ ರೂಪಿಸಿದೆ. ಜನ ಚಳವಳಿಯನ್ನೂ ಕಂಡಿದ್ದೇವೆ. ನಿಸಾರ್ ಅಹ್ಮದ್ ಅವರ ಪಶ್ಚಿಮಘಟ್ಟದ ದಟ್ಟದ ಬೆಟ್ಟದ ಮರಗಳನುಳಿಸಲು ನಡೆನಡೆವಾ...ಎಂಬ ಸಾಲುಗಳು ಹೋರಾಟಕ್ಕೆ ಸ್ಫೂರ್ತಿ ತುಂಬಿದೆ. ಕೇಂದ್ರ ಸರ್ಕಾರವೂ ಇದರ ಸಂರಕ್ಷಣೆಗಾಗಿ 13 ರಾಷ್ಟ್ರೀಯ ಉದ್ಯಾನವನ, 2 ಕಾಯ್ದಿಟ್ಟ ಜೀವಗೋಲ, ರಕ್ಷಿತಾರಣ್ಯ, ವನ್ಯಜೀವಿ ಧಾಮಗಳನ್ನು ನಿರ್ಮಿಸಿದೆ. ಈ ಹಿನ್ನೆಲೆಯಲ್ಲಿ 2012ರ ಜುಲೈ ಒಂದರಂದು ಯುನೆಸ್ಕೊ, ಪಶ್ಚಿಮಘಟ್ಟವನ್ನು ವಿಶ್ವ ಪರಂಪರೆಯ ತಾಣವಾಗಿ ಘೋಷಿಸಿದೆ. ಇಂಥ ಮಹತ್ವದ ಪಶ್ಚಿಮಘಟ್ಟ ಇಂದು ಅಪಾಯದ ಅಂಚಿನಲ್ಲಿದೆ. ಇದರ ರಕ್ಷಣೆ ದೇಶದ ಆದ್ಯತೆಯಾಗಬೇಕು.

**ಅಪಾಯ ಏಕೆ?**

ರಾಜ್ಯದ 258 ಕಿರು ಜಲವಿದ್ಯುತ್ ಯೋಜನೆಗಳ ಪೈಕಿ 61 ಪಶ್ಚಿಮಘಟ್ಟದ ಒಡಲಲ್ಲಿವೆ. ಈ ಯೋಜನೆಗಳ ಅನುಷ್ಠಾನಕ್ಕಾಗಿ ಪಶ್ಚಿಮಘಟ್ಟದ ನದಿಗಳಿಗೆ ಅಣೆಕಟ್ಟು ನಿರ್ಮಾಣವಾಗಲಿದೆ. ಇದು ಪಶ್ಚಿಮಘಟ್ಟದ ನಾಶ ಹಾಗೂ ಮನುಕುಲದ ನಾಶಕ್ಕೆ ನಾಂದಿಯಾಗಲಿದೆ. ಅಪರೂಪದ ಪ್ರಾಣಿಪ್ರಬೇಧ, ಪಕ್ಷಿಸಂಕುಲ, ಜಲಚರ, ಸಸ್ಯರಾಶಿ ಪುಸ್ತಕಗಳಿಗಷ್ಟೇ ಸೀಮಿತವಾಗಲಿದೆ ಎನ್ನುವುದು ಹಿರಿಯ ಸಂಶೋಧಕ ಡಾ.ಎನ್.ಎ.ಮಧ್ಯಸ್ಥ ಅವರ ಅಭಿಪ್ರಾಯ. ಪರಿಸರಕ್ಕೂ ಸಾಕಷ್ಟು ಹಾನಿಯಾಗಲಿದ್ದು, ವಿದ್ಯುತ್ ಉತ್ಪಾದನೆ ಯಂತ್ರಗಳ ಸದ್ದು, ನೂರಾರು ಪ್ರಬೇಧಗಳನ್ನು ಬಲಿ ಪಡೆಯಲಿದೆ.

ಪಶ್ಚಿಮಘಟ್ಟ ಭಾರತಕ್ಕೆ ನಿಸರ್ಗದತ್ತವಾಗಿ ಬಂದಿರುವ ವರದಾನ. ಅದು ವಿಶ್ವದ ಆಸ್ತಿ. ಈ ಪರಿಸರ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ. ಇದರ ಉಳಿವಿಗಾಗಿ ಕೇಂದ್ರ ಸರ್ಕಾರ ಮುಂದಾಗಿದ್ದು, ಪಶ್ಚಿಮ ಘಟ್ಟಗಳ ಪರಿಸರ ರಕ್ಷಣೆ ಕುರಿತ ಎರಡು ತಜ್ಞ ವರದಿಗಳು ಸರ್ಕಾರದ ಮುಂದಿವೆ. ಒಂದು ಕೆಲ ವರ್ಷದ ಹಿಂದೆ ಪರಿಸರ ತಜ್ಞ ಗಾಡ್ಗೀಳ್ ಸಲ್ಲಿಸಿದ ವರದಿ; ಇನ್ನೊಂದು ಕಸ್ತೂರಿರಂಗನ್ ವರದಿ. ಈ ವರದಿಗಳ ಸುತ್ತವೇ ಪಶ್ಚಿಮಘಟ್ಟ ರಕ್ಷಣೆ ಕುರಿತ ಯೋಜನೆಗಳ ಚರ್ಚೆ ಸುತ್ತುತ್ತಿದೆ. ಗಾಡ್ಗೀಳ್ ವರದಿಯನ್ನು ಅಧಿಕೃತವಾಗಿ ಸ್ವೀಕರಿಸಿ, ಸೂಕ್ತ ಆದೇಶ ನೀಡಬೇಕು ಎಂಬ ಮನವಿ ಕೇಂದ್ರ ಹಸಿರು ಪಂಚಾಯ್ತಿಯ ಮುಂದಿದೆ. ಆದರೆ ಇದುವರೆಗೂ ವರದಿ ಪರಿಶೀಲನೆ ನಡೆದಿಲ್ಲ.

ಎರಡನೇಯದು ಸರ್ಕಾರವೇ ಪ್ರಕಟಿಸಿರುವ ನಿಯಮಗಳಿಗೆ ಆಧಾರವಾದ ಕಸ್ತೂರಿರಂಗನ್ ವರದಿ. ಸರ್ಕಾರದ ಪ್ರಕಟಣೆಯನ್ನು ಹಲವಾರು ಪರಿಸರವಾದಿ ಸಂಘಟನೆಗಳು ವಿರೋಧಿಸಿದ್ದು, ಇದರ ಜತೆಗೇ ಗಾಡ್ಗೀಳ್ ವರದಿಯಲ್ಲಿ ಅಡಕವಾಗಿರುವ ಅಂಶಗಳನ್ನೊಳಗೊಂಡ ನಿಯಮಗಳನ್ನೂ ಪ್ರಕಟಿಸಬೇಕು ಎನ್ನುವುದು ಪರಿಸರವಾದಿಗಳ ವಾದ.

ಕೇರಳದ ವಯನಾಡ್ ಸೀಮೆಯಲ್ಲಿ ಸರ್ಕಾರದ ನಿಯಮಾವಳಿ ವಿರುದ್ಧ ಆಂದೋಲನ ಆರಂಭವಾಗಿದೆ. ಗಾಡ್ಗೀಳ್ ವರದಿಯನ್ನು ವ್ಯವಸ್ಥಿತವಾಗಿ ಮೂಲೆಗುಂಪು ಮಾಡಲಾಗಿದೆ ಎಂಬ ಗುಮಾನಿಯೇ ವಿವಾದದ ಮೂಲ. ಪಶ್ಚಿಮಘಟ್ಟದ ಸೀಮೆಯಲ್ಲಿ ಬಾಳಿ ಬದುಕಬೇಕಾದ ಸಣ್ಣ ಸಮುದಾಯಗಳಿಗೆ ನೀಡಬೇಕಾದ ರಕ್ಷಣೆ ಹಾಗೂ ಪರಿಸರ ರಕ್ಷಣೆ ವಿಚಾರದಲ್ಲಿ ಸಮತೋಲನ ಸಾಧಿಸುವುದು ಹಾಗೂ ವಿವಾದ ದೊಡ್ಡ ಸ್ವರೂಪಕ್ಕೆ ತಿರುಗುವ ಮುನ್ನ ಸರ್ಕಾರ ಎಚ್ಚೆತ್ತುಕೊಳ್ಳಬೇಕಾದ್ದು ತುರ್ತು ಅಗತ್ಯ.

ಕೇಂದ್ರ ಪರಿಸರ ಸಚಿವೆಯಾಗಿದ್ದ ಜಯಂತಿ ನಟರಾಜನ್ ಪ್ರಕಾರ ಈ ನಿಯಮಗಳು ಅಂತಿಮವಲ್ಲ; ಅದಕ್ಕೆ ಆಕ್ಷೇಪ, ತಿದ್ದುಪಡಿ ಸಲಹೆಗಳನ್ನು ನೀಡಲು ಅವಕಾಶವಿದೆ. ಆಸಕ್ತ ಎಲ್ಲರೂ ತಮ್ಮ ನಿಲುವುಗಳನ್ನು ವಿವರವಾಗಿ ಸಚಿವಾಲಯಕ್ಕೆ ಕಳುಹಿಸಿದರೆ ಮಾತ್ರ ವಿವಾದ ಬಗೆಹರಿಸಲು ಸಾಧ್ಯ.

ಕಸ್ತೂರಿರಂಗನ್ ವರದಿ ಪ್ರಕಾರ, ಈ ಪ್ರದೇಶದ ಶೇಕಡ 37ರಷ್ಟು ಭಾಗದಲ್ಲಿ ಯಾವುದೇ ಗಣಿಗಾರಿಕೆ, ವಿದ್ಯುತ್ ಉತ್ಪಾದನೆ, ಬೃಹತ್ ಕಟ್ಟಡಗಳ ನಿರ್ಮಾಣ ಮಾಡುವಂತಿಲ್ಲ. ಪರಿಸರವಾದಿಗಳು ಈ ವರದಿಯ ಹಲವು ಅಂಶಗಳನ್ನು ವಿರೋಧಿಸುತ್ತಾರೆ. ಆದರೆ ಜನಜೀವನದ ಸ್ಥಿತಿಗತಿ, ನಿಸರ್ಗದತ್ತವಾದ ಸಂಪತ್ತನ್ನು ಅಭಿವೃದ್ಧಿಗೆ ಬಳಸಿಕೊಳ್ಳುವ ಅಗತ್ಯವನ್ನು ಕಡೆಗಣಿಸುವಂತಿಲ್ಲ. 99 ಸಾವಿರ ಚದರ ಕಿಲೋಮೀಟರ್ ವಿಸ್ತೀರ್ಣದ ಪ್ರದೇಶದಲ್ಲಿ ಪರಿಸರ ತಕ್ಷಣಾ ಕ್ರಮಗಳ ಕುರಿತು ವರದಿ ಏನನ್ನೂ ಹೇಳಿಲ್ಲ. ತುಂಬಾ ಸೂಕ್ಷ್ಮ ಸ್ಥಿತಿಯನ್ನು ಎದುರಿಸುತ್ತಿರುವ ಪ್ರದೇಶಗಳ ಕಡೆಯೇ ಸಮಿತಿ ಗಮನ ಕೇಂದ್ರೀಕರಿಸಿತ್ತು. ಇಲ್ಲೂ ಜನ ವಾಸಿಸುತ್ತಿದ್ದು, ಅವರನ್ನು ಬೇರೆ ಕಡೆಗೆ ಕಳುಹಿಸುವಂತಿಲ್ಲ ಎಂದು ವರದಿ ಸ್ಪಷ್ಟಪಡಿಸಿದೆ.


www.shikarat.com
Universal Coaching Centre

ಇಡೀ ಪಶ್ಚಿಮಘಟ್ಟ ಪ್ರದೇಶವನ್ನು ಪರಿಸರ ಸೂಕ್ಷ್ಮಪ್ರದೇಶ ಎಂದು ಹೇಳಿದ್ದ ಮಾಧವ ಗಾಡ್ಗೀಳ್ ಸಮಿತಿಯ ವರದಿ ಅನುಷ್ಠಾನ ಯೋಗ್ಯವಲ್ಲ ಎಂಬ ಟೀಕೆ ಹಿನ್ನೆಲೆಯಲ್ಲಿ ಕಸ್ತೂರಿರಂಗನ್ ಸಮಿತಿ ರಚಿಸಲಾಗಿದ್ದು, ಇದು ಒಟ್ಟು ಪ್ರದೇಶದ ಶೇ. 37 ಭಾಗ ಮಾತ್ರ ಸೂಕ್ಷ್ಮ ಪ್ರದೇಶ ಎಂದು ಅಭಿಪ್ರಾಯಪಟ್ಟಿದೆ.

ಕೈಗಾರಿಕೆಗಳಿಗೆ ಮಾರಕ, ಅರಣ್ಯವಾಸಿ ಬುಡಕಟ್ಟು ಜನರ ಹಕ್ಕುಗಳ ದಮನ ಹಾಗೂ ಸಂರಕ್ಷಣೆಗೆ ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರವನ್ನು ದಮನಿಸಿ ಪ್ರಾಧಿಕಾರದ ರಚನೆಗೆ ಶಿಫಾರಸು ಮಾಡಿದೆ. ಪರಿಸರ ಸಂರಕ್ಷಣಾ ಕಾರ್ಯದಲ್ಲಿ ಕೇಂದ್ರ– ರಾಜ್ಯಗಳ ಅಧಿಕಾರವನ್ನು ಘರ್ಷಣೆಗೆ ಹೆಚ್ಚಿದೆ ಎಂಬ ವ್ಯವಸ್ಥಿತ ಅಪಪ್ರಚಾರ ಗಾಡ್ಗೀಳ್ ವರದಿ ವಿರುದ್ಧ ನಡೆಯಿತು. ಇಂಥ ವಿವಾದಾತ್ಮಕ ಅಂಶಗಳನ್ನಷ್ಟೇ ಸ್ಥಳೀಯ ಭಾಷೆಗಳಿಗೆ ತರ್ಜುಮೆಗೊಳಿಸಿ, ಹಂಚಿರುವುದೇ ವಿವಾದಕ್ಕೆ ಮೂಲಕಾರಣ.

ಅರಣ್ಯವಾಸಿ ಬುಡಕಟ್ಟು ಜನ ಮತ್ತು ರೈತರನ್ನು ಗಾಡ್ಗೀಳ್ ವರದಿ ವಿರುದ್ಧ ಎತ್ತಿಕಟ್ಟಿದವರು ಯಾರು, ಕೈಗಾರಿಕೆ, ಗಣಿಗಾರಿಕೆ, ರಾಜಕಾರಣಿಗಳ ಅನೈತಿಕ ಸಂಬಂಧದ ಲಾಬಿಗೆ ಕೇಂದ್ರ ಸರ್ಕಾರ ಮಣಿಯಿತೇ ಎಂಬ ಸಂಶಯ ಸಾರ್ವಜನಿಕರಲ್ಲಿದೆ.

ಹಿಮಾಲಯಕ್ಕಿಂತಲೂ ಪುರಾತನ ಎನಿಸಿಕೊಂಡಿರುವ ಈ ಪರ್ವತ ಶ್ರೇಣಿ ಜೀವವೈವಿಧ್ಯ ಸಂಪತ್ತಿನ ಖಜಾನೆ. ಇದನ್ನು ಪ್ರತ್ಯೇಕವಾಗಿ ಮುಚ್ಚಿಟ್ಟು ಕಾಪಾಡಿಕೊಳ್ಳಬೇಕು. 15 ಕೋಟಿ ವರ್ಷ ಹಿಂದೆ ಅಸ್ತಿತ್ವಕ್ಕೆ ಬಂದಿತೆನ್ನಲಾದ ಈ ಪ್ರಾಕೃತಿಕ ಸಿರಿ ಸಂಪತ್ತಿನ ರಕ್ಷಣೆ ಎಲ್ಲರ ಹೊಣೆ.

ಹೊಸ ರೈಲ್ವೆ ಮಾರ್ಗ, ಹೆದ್ದಾರಿ, ಜಲವಿದ್ಯುತ್ ಯೋಜನೆಗಳಿಗೂ ಇಲ್ಲಿ ಆಸ್ಪದ ನೀಡಬಾರದು ಎಂದು ಗಾಡ್ಗೀಳ್ ಸಮಿತಿ ಪ್ರತಿಪಾದಿಸಿದೆ. ಆದರೆ ಕಸ್ತೂರಿರಂಗನ್ ವರದಿ ಗಣಿನಿಷೇಧವನ್ನು ಶೇಕಡ 50ಕ್ಕೆ ಸೀಮಿತಗೊಳಿಸಿದೆ. ಗುಂಡ್ಯ ಹಾಗೂ ಕೇರಳದ ಅತ್ತಿರಹಳ್ಳಿ ಜಲವಿದ್ಯುತ್ ಯೋಜನೆಗಳಿಗೆ ಹಸಿರು ನಿಶಾನೆ ತೋರಿದೆ. ಗಾಡ್ಗೀಳ್ ಸಮಿತಿಯ ಜನತಾಂತ್ರಿಕ ಸಂವಾದವನ್ನು ದಮನಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ವ್ಯವಸ್ಥಿತ ಸಂಚು ರೂಪಿಸಿವೆ ಎನ್ನುವುದು ಮಾಧವ ಗಾಡ್ಗೀಳ್ ಅವರ ಆರೋಪ. ಎಲ್ಲ ವರ್ಗದವರನ್ನು ವಿಶ್ವಾಸಕ್ಕೆ ಪಡೆದೇ ವರದಿ ಸಿದ್ಧಪಡಿಸಲಾಗಿತ್ತು ಎಂದು ಸಮರ್ಥಿಸಿಕೊಳ್ಳುತ್ತಾರೆ.

ಆದರೆ ಅತ್ಯಾಧುನಿಕ ಉಪಗ್ರಹ ಬಿಂಬ ತಂತ್ರಜ್ಞಾನ ಬಳಸಿ ಪಶ್ಚಿಮಘಟ್ಟದ ಅಧ್ಯಯನ ನಡೆಸಲಾಗಿದೆ. ಜನವಸತಿ, ಕೃಷಿ ಪ್ರದೇಶ ಹಾಗೂ ಪ್ಲಾಂಟೇಷನ್‌ಗಳು ಶೇ. 58.44 ಭಾಗದಲ್ಲಿವೆ. ಉಳಿದ 41.56 ಭಾಗದ ಶೇಕಡ 90 ಭಾಗ ಸೂಕ್ಷ್ಮ ಪ್ರದೇಶ ಎಂದು ಕಸ್ತೂರಿರಂಗನ್ ವಾದಿಸುತ್ತಾರೆ. ಈ ಪ್ರದೇಶದಲ್ಲಿ ಗಣಿಗಾರಿಕೆ ನಿಷಿದ್ಧ; ಶಾಖೋತ್ಪನ್ನ ವಿದ್ಯುತ್ ಸ್ಥಾವರ ಸ್ಥಾಪಿಸುವಂತಿಲ್ಲ. ರಸಗೊಬ್ಬರ, ತೈಲಾಗಾರ, ಚರ್ಮೋದ್ಯಮ, ತಾಮ್ರದ ಕುಲುಮೆ ಆರಂಭಿಸುವಂತಿಲ್ಲ. ಆದರೆ ಆಹಾರ ಮತ್ತು ಹಣ್ಣು ಸಂರಕ್ಷಣೆ ಘಟಕ ಆರಂಭಿಸಬಹುದು ಎಂದು ವರದಿ ಹೇಳಿದೆ.

ಪಶ್ಚಿಮಘಟ್ಟದಲ್ಲಿ ಮಾನವ ನಿರ್ಮಿತ ಬಂಡವಾಳ ಬೆಳೆಯುತ್ತಿದೆ. ಪ್ರಕೃತಿ ನಿರ್ಮಿತ ಖಜಾನೆ ಬರಿದಾಗುತ್ತಿದೆ ಎಂಬ ಗಾಡ್ಗೀಳ್ ವರದಿಯ ಕಾಳಜಿಯನ್ನು ಅಭಿವೃದ್ಧಿಗೆ ಮಾರಕ ಎಂದು ಹೇಳಿ ಮೂಲೆಗುಂಪು ಮಾಡಲಾಗಿದೆ. ಇಂಥ ಚರ್ಚೆಯನ್ನು ಹುಟ್ಟುಹಾಕಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಕೆಲ ಹಿತಾಸಕ್ತಿಗಳ ಹುನ್ನಾರವೂ ಪಶ್ಚಿಮಘಟ್ಟದ ರಕ್ಷಣೆಗೆ ಮಾರಕವಾಗಿದೆ. ಇಂಥ ಅಪೂರ್ವ ತಾಣ ರಕ್ಷಿಸುವಲ್ಲಿ ರಾಜಕೀಯ ಇಚ್ಛಾಶಕ್ತಿ ಹಾಗೂ ಸಮುದಾಯಿಕ ಚಳವಳಿ ಅನಿವಾರ್ಯ.

## 2. ಕಾವೇರಿ ವಿವಾದ: ರಾಜ್ಯಕ್ಕೆ ಅನ್ಯಾಯದ ಪರಂಪರೆ ಅಣಡಿತಜಥಿ

ಕಾವೇರಿ ಕಗ್ಗಂಟು ಶತಮಾನಗಳಿಂದ ಬಿಡಿಸಲಾಗದ ವಿವಾದ. ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ವೈಷಮ್ಯದ ಕಾವು ಏರಿಸುವ ಈ ವಿವಾದ ಎರಡೂ ರಾಜ್ಯಗಳಲ್ಲಿ ಪ್ರಬಲ ರಾಜಕೀಯ ಅಸ್ತ್ರ. ವಿವಾವ ಯಥಾಸ್ಥಿತಿಯಲ್ಲಿ ಮುಂದುವರಿದರಷ್ಟೇ ಲಾಭ ಎನ್ನುವುದು ಎರಡೂ ರಾಜ್ಯಗಳ ರಾಜಕಾರಣಿಗಳ ಅಭಿಮತ. ಆದ್ದರಿಂದಲೇ ಶಾಶ್ವತ ಪರಿಹಾರ ಎರಡೂ ರಾಜ್ಯಗಳಿಗೆ ಬೇಕಾಗಿಲ್ಲ.

ಕಾವೇರಿ ಕನ್ನಡಿಗರ ಜೀವನದಿ. ತಲಕಾವೇರಿಯಲ್ಲಿ ಹುಟ್ಟಿ ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಪುದುಚೇರಿ ಭೂಭಾಗಗಳಲ್ಲಿ ಹರಿದು ಬಂಗಾಳಕೊಲ್ಲಿ ಸೇರುವ ನದಿ ಕರ್ನಾಟಕದಲ್ಲಿ 380 ಕಿಲೋಮೀಟರ್ ಹರಿಯುತ್ತದೆ. ತಮಿಳುನಾಡಿನಲ್ಲಿ 375 ಕಿ.ಮೀ. ಹರಿಯುತ್ತದೆ. ನದಿನೀರಿಗೆ ಕರ್ನಾಟಕದ ಕೊಡುಗೆ 425 ಟಿಎಂಸಿ ಆದರೆ, ತಮಿಳುನಾಡಿನ ಕೊಡುಗೆ 201 ಟಿಎಂಸಿ. ನದಿನೀರಿನ ಬಳಕೆಯಲ್ಲಿ ವಿವಾದ ಚೋಳ– ಪಾಂಡ್ಯರ ಕಾಲದಿಂದಲೇ ಇತ್ತು. 1881ರಲ್ಲಿ ಮೈಸೂರು ಸಂಸ್ಥಾನದ ಆಡಳಿತ ಬ್ರಿಟಿಷರಿಂದ ರಾಜಮನೆತನಕ್ಕೆ ಬಂದ ದಿನದಿಂದ ಕಾವೇರಿ ವಿವಾದ ರಾಜಕೀಯ ಸ್ವರೂಪ ಪಡೆದುಕೊಂಡಿದೆ. ಕಾವೇರಿ ಹರಿವಿಗೆ ತಡೆಯೊಡ್ಡುವ ಯಾವುದೇ ಕಾಮಗಾರಿಯನ್ನು ಮೈಸೂರು ಕೈಗೊಳ್ಳಬಾರದು ಎನ್ನುವುದು ಅಂದಿನ ಮದ್ರಾಸು ಪ್ರಾಂತ್ಯದ ವಾದ. ಮರುವರ್ಷ ಬ್ರಿಟಿಷ್ ಮಧ್ಯಸ್ಥಿಕೆಯಲ್ಲಿ ಒಪ್ಪಂದ ನಡೆದು, ಯಾವುದೇ ಕಾಮಗಾರಿ ಕೈಗೊಳ್ಳುವ ಮುನ್ನ ಮದ್ರಾಸಿನ ಒಪ್ಪಿಗೆ ಪಡೆಯಬೇಕು ಎಂದು ನಿರ್ಣಯವಾಗಿತು. ಬ್ರಿಟಿಷರು ಮದ್ರಾಸ್ ಪ್ರಾಂತ್ಯದಲ್ಲೇ ನೆಲೆಸಿದ್ದರಿಂದ ಮೈಸೂರು ಪ್ರಾಂತ್ಯಕ್ಕೆ ಅನ್ಯಾಯವಾಯಿತು. ಈ ಪರಂಪರೆ ಇಂದಿಗೂ ಮುಂದುವರಿದಿದೆ.

ಎರಡೂ ಸಂಸ್ಥಾನಗಳು ಒಪ್ಪಂದ ಉಲ್ಲಂಘಿಸಿದವು. ಮೈಸೂರು ಸಂಸ್ಥಾನ ಕೃಷ್ಣರಾಜಸಾಗರ ಅಣೆಕಟ್ಟು ಆರಂಭಿಸಿದರೆ, ಮದ್ರಾಸು ಪ್ರಾಂತ್ಯ ಮೆಟ್ಟೂರು ಅಣೆಕಟ್ಟು ನಿರ್ಮಾಣಕ್ಕೆ ತೊಡಗಿತು. ಇದರಿಂದ ವಿವಾದ ಉಲ್ಬಣವಾಯಿತು. ಬ್ರಿಟಿಷ್ ಸರ್ಕಾರ ಮತ್ತೆ ಸಂಧಾನ ಮಾಡಿತು. ಮೈಸೂರಿನ ಮುಖ್ಯ ಎಂಜಿನಿಯರ್ ಸರ್ ಎಂ.ವಿಶ್ವೇಶ್ವರಯ್ಯ ನೇತೃತ್ವದಲ್ಲಿ 124 ಅಡಿ ಎತ್ತರದ ಕನ್ನಂಬಾಡಿ ಅಣೆಕಟ್ಟು ಸ್ಥಾಪಿಸಿತು. 40 ಟಿಎಂಸಿ ನೀರು ಸಂಗ್ರಹಿಸುವ ಸಾಮರ್ಥ್ಯದ ಈ ಅಣೆಕಟ್ಟು 1.5 ಲಕ್ಷ ಎಕರೆಗೆ ನೀರಾವರಿ ಕಲ್ಪಿಸುತ್ತದೆ. 1924ರಲ್ಲಿ ಆದ 50 ವರ್ಷಗಳ ಒಪ್ಪಂದದ ಅವಧಿ ಮುಗಿದ ತಕ್ಷಣ ಕರ್ನಾಟಕ ಈ ಒಪ್ಪಂದಕ್ಕೆ ತಾನು ಬದ್ಧವಾಗುವುದಿಲ್ಲ ಎಂದು ಘೋಷಿಸಿತು. ತಮಿಳುನಾಡಿನಲ್ಲಿ ಆ ವೇಳೆಗೆ ಕಾವೇರಿ 28 ಲಕ್ಷ ಎಕರೆಗೆ ನೀರು ಉಣಿಸುತ್ತಿದ್ದಳು. ಕರ್ನಾಟಕದಲ್ಲಿ ಕೇವಲ 6.8 ಲಕ್ಷ ಎಕರೆಗೆ ಕಾವೇರಿ ನೀರು ಬಳಕೆಯಾಗುತ್ತಿತ್ತು. ಈ ತಾರತಮ್ಯ ವಿರುದ್ಧ ಕರ್ನಾಟಕ ಧ್ವನಿ ಎತ್ತಿದ್ದರಿಂದ ಆತಂಕಗೊಂಡ ತಮಿಳುನಾಡು ಕೇಂದ್ರದ ಮೊರೆ ಹೋಯಿತು.


www.shikarat.com

ವಿವಾದಕ್ಕೆ ಸರ್ವಸಮ್ಮತ ಪರಿಹಾರ ಕಾಣದ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ಸೂಚನೆಯಂತೆ 1990ರಲ್ಲಿ ಕಾವೇರಿ ಜಲನ್ಯಾಯಮಂಡಳಿ ರಚನೆಯಾಯಿತು. ಈ ನ್ಯಾಯಮಂಡಳಿ 1991ರ ಜೂನ್ 25ರಂದು ಮಧ್ಯಂತರ ಆದೇಶ ನೀಡಿತು. 1980ರಿಂದ 90ರವರೆಗೆ ಮೆಟ್ಟೂರು ಜಲಾಶಯಕ್ಕೆ ಹರಿದ ನೀರಿನ ಪ್ರಮಾಣದ ಆಧಾರದಿಂದ ಕರ್ನಾಟಕ 205 ಟಿಎಂಸಿ ನೀರನ್ನು ತಮಿಳುನಾಡಿಗೆ ಹರಿಸಬೇಕು ಎಂದು ಆದೇಶ ನೀಡಲಾಯಿತು. ಜತೆಗೆ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಾವರಿ ಜಮೀನನ್ನು 11.2 ಲಕ್ಷ ಎಕರೆಗಿಂತ ಹೆಚ್ಚಿಸಬಾರದು ಎಂದು ನಿರ್ಬಂಧ ವಿಧಿಸಿತು.

ಇಂಥ ಏಕಪಕ್ಷೀಯ ನಿರ್ಧಾರ ಕರ್ನಾಟಕದ ಜನರನ್ನು ರೊಚ್ಚಿಗೆಬ್ಬಿಸಿತು. ದಕ್ಷಿಣ ಕರ್ನಾಟಕದಲ್ಲಿ ಪ್ರತಿಭಟನೆ ಮುಗಿಲು ಮುಟ್ಟಿತು. ಕರ್ನಾಟಕದ ತಮಿಳರು ಕಾಲಿಗೆ ಬುದ್ಧಿ ಹೇಳಬೇಕಾಯಿತು. ಉಭಯ ರಾಜ್ಯಗಳ ನಡುವೆ ಸಂಚಾರ ಸ್ತಬ್ಧವಾಯಿತು. ನಂತರ ಕರ್ನಾಟಕ ವಿಧಾನಮಂಡಲ ಮಧ್ಯಂತರ ಆದೇಶವನ್ನು ತಿರಸ್ಕರಿಸುವ ಒಮ್ಮತದ ನಿರ್ಧಾರ ಕೈಗೊಂಡಿತು. ರಾಜ್ಯದಲ್ಲಿ ಎಸ್.ಬಂಗಾರಪ್ಪ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲಿ ತಮ್ಮದೇ ಪಕ್ಷದ ಸರ್ಕಾರ ಇದ್ದರೂ ಒತ್ತಡ ತಂದು "ಕಾವೇರಿ ಜಲಾನಯನ ಪ್ರದೇಶದ ನೀರಾವರಿ ಸಂರಕ್ಷಣಾ ಸುಗ್ರೀವಾಜ್ಞೆ" ಹೊರತರುವಂತೆ ಮಾಡಿತು. ಈ ಮೂಲಕ ಕನ್ನಡಿಗರ ಹಿತರಕ್ಷಣೆಗೆ ಬದ್ಧತೆ ಪ್ರದರ್ಶಿಸಿತು. ಸುಪ್ರೀಂಕೋರ್ಟ್ ಇದನ್ನು ಅಸಿಂಧು ಎಂದು ಘೋಷಿಸಿತು. ಮಧ್ಯಂತರ ಆದೇಶ ಮತ್ತು ನಂತರದ ಆದೇಶ ಕಾರ್ಯರೂಪಕ್ಕೆ ತರಲು ಕೇಂದ್ರ ಸರ್ಕಾರ 1998ರಲ್ಲಿ ಕಾವೇರಿ ನದಿ ಪ್ರಾಧಿಕಾರ ಸ್ಥಾಪಿಸಿತು. ನಂತರ 2007ರ ಫೆಬ್ರವರಿ 5ರಂದು ನ್ಯಾಯಮಂಡಳಿ ಅಂತಿಮ ಆದೇಶ ನೀಡಿ ತಮಿಳುನಾಡಿಗೆ 192 ಟಿಎಂಸಿ ನೀರು ಬಿಡುವಂತೆ ಆದೇಶಿತು. ಈ ಆದೇಶ ವಿರುದ್ಧ ಕರ್ನಾಟಕ ಸುಪ್ರೀಂಕೋರ್ಟ್‌ನಲ್ಲಿ ವಿಶೇಷ ರಜಾಕಾಲದ ಅರ್ಜಿ ಸಲ್ಲಿಸಿದೆ. ಕೇರಳ ಹಾಗೂ ತಮಿಳುನಾಡು ಸರ್ಕಾರಗಳೂ ಇಂಥದ್ದೇ ಅರ್ಜಿ ಸಲ್ಲಿಸಿದ್ದು, ವಿಚಾರಣೆ ಇನ್ನಷ್ಟೇ ನಡೆಯಬೇಕಿದೆ.

ಕಾವೇರಿ ನ್ಯಾಯಮಂಡಳಿಯಲ್ಲಿ ಕರ್ನಾಟಕ 465 ಟಿಎಂಸಿ ನೀರಿನ ಹಕ್ಕು ಪ್ರತಿಪಾದಿಸಿದೆ. ಆದರೆ ನ್ಯಾಯಮಂಡಳಿ ಕೇವಲ 270 ಟಿಎಂಸಿಯನ್ನು ಮಂಜೂರು ಮಾಡಿದೆ ಎನ್ನುವುದು ಕರ್ನಾಟಕದ ಆಕ್ಷೇಪ. ಇದಾಗ ಬಳಿಕ ರಾಜ್ಯದ ಎಲ್ಲ ಯೋಜನೆಗಳಿಗೆ ತಮಿಳುನಾಡು ಅಡ್ಡಗಾಲು ಹಾಕುತ್ತಲೇ ಬಂದಿದೆ. ಶಿವನಸಮುದ್ರ ಮತ್ತು ಮೇಕೆದಾಟು ಯೋಜನೆ ತಡೆಯುವಂತೆ ಮನವಿ ಸಲ್ಲಿಸಿದೆ. ಹೊಸ ಚೆಕ್‌ಡ್ಯಾಂ ನಿರ್ಮಾಣ, ಹೂಳು ತೆಗೆಯುವ ಕಾಮಗಾರಿಯನ್ನೂ ನಿರ್ಬಂಧಿಸುವಂತೆ ಕೋರಿದೆ. 2012ರಲ್ಲಿ ಮತ್ತೊಂದು ಅರ್ಜಿ ಸಲ್ಲಿಸಿದೆ. ಇಷ್ಟಾಗಿಯೂ 2007ರಿಂದೀಚೆಗೆ ಎರಡೂ ರಾಜ್ಯಗಳ ರೈತರು ನೀರಾವರಿ ಲಭ್ಯತೆಯಲ್ಲಿ ತೊಂದರೆ ಅನುಭವಿಸಿಲ್ಲ ಎನ್ನುವುದು ಕರ್ನಾಟಕದ ನ್ಯಾಯಬದ್ಧ ನಿಲುವಿಗೆ ಉದಾಹರಣೆ.

ತಮಿಳುನಾಡಿಗೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಅಂತರ್ಜಲ ಸೇರಿದಂತೆ ಇತರ ಜಲಮೂಲಗಳಿದ್ದರೂ, ಅದನ್ನು ಮುಚ್ಚಿಟ್ಟು ಮೊಂಡುವಾದ ಮುಂದಿಟ್ಟಿದೆ. ಕರ್ನಾಟಕ ಭೀಕರ ಜಲಕ್ಷಾಮದಿಂದ ತತ್ತರಿಸುವ ವೇಳೆಯಲ್ಲೂ ತಮಿಳುನಾಡಿಗೆ ನೀರು ಬಿಡುವಂತೆ ಮನಮೋಹನ ಸಿಂಗ್ ಸರ್ಕಾರ ಹೊರಡಿಸಿದ ಆದೇಶ ವಿರುದ್ಧ ಮತ್ತೆ 2012ರಲ್ಲಿ ಚಳವಳಿ ತೀವ್ರ ಸ್ವರೂಪ ಪಡೆಯಿತು. ಕಾವೇರಿ ಉಸ್ತುವಾರಿ ಸಮಿತಿ ಕೂಡಾ ಏಕಪಕ್ಷೀಯ ನಿರ್ಧಾರ ಪ್ರಕಟಿಸಿ ನೀರು ಬಿಡಲು ಆದೇಶ ನೀಡಿತು. ಹಿಂದೆ ಬ್ರಿಟಿಷರಿಂದ ಮೈಸೂರು ಪ್ರಾಂತ್ಯಕ್ಕೆ ಅನ್ಯಾಯವಾದಂತೆ ಇಂದು ಕೇಂದ್ರ ಸರ್ಕಾರದಿಂದ ಆಗುತ್ತಿದೆ.

ಮೂಲ ಸಮಸ್ಯೆ ಇರುವುದೇ 1892ರ ಒಪ್ಪಂದದಲ್ಲಿ. ಮೈಸೂರು ಪ್ರಾಂತ್ಯ ಬ್ರಿಟಿಷ್ ಆಡಳಿತದ ಅಧೀನದಲ್ಲಿದ್ದ ಕಾರಣ ಮದ್ರಾಸ್ ಪ್ರಾಂತ್ಯದ ಏಕಪಕ್ಷೀಯ ನಿಲುವನ್ನು ವಿರೋಧಿಸುವ ಸ್ಥಿತಿಯಲ್ಲಿರಲಿಲ್ಲ. ಆದ್ದರಿಂದ ಅನ್ಯಾಯದ ಪರಂಪರೆ ಮುಂದುವರಿಯುವಂತಾಗಿದೆ. ಸ್ವಾತಂತ್ರ್ಯಾ ನಂತರ ಕರ್ನಾಟಕ ಕಬಿನಿ, ಹೇಮಾವತಿ, ಹಾರಂಗಿ, ಸುವರ್ಣಾವತಿ ಯೋಜನೆಗಳನ್ನು ಆರಂಭಿಸಿದಾಗ ತಮಿಳುನಾಡು ವಿರೋಧ ವ್ಯಕ್ತಪಡಿಸಿತ್ತು. ಈ ಹಂತದಲ್ಲಾದರೂ ಕೇಂದ್ರ ಸರ್ಕಾರ ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಎರಡೂ ರಾಜ್ಯಗಳಿಗೆ ಒಪ್ಪಿಗೆಯಾಗುವಂತೆ ನೀರು ಹಂಚಿಕೆ ಮಾಡಿದ್ದರೆ ಇಂಥ ವಿವಾದಕ್ಕೆ ಅವಕಾಶವೇ ಇರುತ್ತಿರಲಿಲ್ಲ.

ಗಮನಿಸಬೇಕಾದ ಇನ್ನೊಂದು ಮಹತ್ವದ ಅಂಶವೆಂದರೆ 1972ರಲ್ಲಿ ಕೇಂದ್ರ ಸರ್ಕಾರ ವಿವಿಧ ರಾಜ್ಯಗಳ ನದಿನೀರಿನ ಬಳಕೆ ತಿಳಿಯಲು ಸತ್ಯಶೋಧನಾ ಸಮಿತಿ ನೇಮಿಸಿದ್ದು, ಈ ಅವಧಿಯಲ್ಲಿ ತಮಿಳುನಾಡು ತನ್ನ ನೀರಾವರಿ ಪ್ರದೇಶವನ್ನು 14.4 ಲಕ್ಷ ಎಕರೆಯಿಂದ 25.8 ಲಕ್ಷಕ್ಕೆ ಹೆಚ್ಚಿಸಿಕೊಂಡಿದೆ. ಆದರೆ ಕರ್ನಾಟಕದಲ್ಲಿ ಈ ಪ್ರಮಾಣ ಕೇವಲ 8.8 ಲಕ್ಷ ಎಕರೆ. ತಮಿಳುನಾಡಿನಂತೆ ನಾವು ಕೂಡಾ ನೀರಾವರಿ ಪ್ರದೇಶವನ್ನು ವಿಸ್ತರಿಸಿಕೊಳ್ಳದಿದ್ದುದೇ ಇಂದು ನಮಗೆ ಕಂಟಕವಾಗಿ ಪರಿಣಮಿಸಿದೆ.

ಆರಂಭದಿಂದಲೂ ಕರ್ನಾಟಕದಲ್ಲಿ ನೀರಾವರಿಗೆ ಕಾವೇರಿ ನೀರು ದೊರಕದಂತೆ ಮಾಡಿ ತನ್ನ ನೀರಾವರಿ ಪ್ರದೇಶವನ್ನು ಹೆಚ್ಚಿಸಿಕೊಂಡ ತಮಿಳುನಾಡು ತನ್ನ ಹಕ್ಕು ಎಂದು ನ್ಯಾಯಮಂಡಳಿ ಮುಂದೆ ಪ್ರತಿಪಾದಿಸಿದೆ. ಪರಿಸರ ರಕ್ಷಣೆಗಾಗಿ ಕರ್ನಾಟಕ 10 ಟಿಎಂಸಿ ನೀರು ಬಿಡಬೇಕು ಎಂದೂ ನ್ಯಾಯಮಂಡಳಿ ಸೂಚಿಸಿದೆ. ಪರಿಸರ ರಕ್ಷಣೆ ಕೇವಲ ಕರ್ನಾಟಕದ ಹೊಣೆಯೇ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ.

ಕುಡಿಯುವ ನೀರಿನ ಸಲುವಾಗಿ ನ್ಯಾಯಮಂಡಳಿ ಕರ್ನಾಟಕಕ್ಕೆ ನಿಗದಿಪಡಿಸಿರುವುದು ಕೇವಲ ಎರಡು ಟಿಎಂಸಿ ನೀರು. ಆದರೆ ಬೆಂಗಳೂರು, ಮಂಡ್ಯ, ಚಾಮರಾಜನಗರ, ಮೈಸೂರು ಮತ್ತು ರಾಮನಗರಕ್ಕೆ ಕುಡಿಯುವ ನೀರು ಪೂರೈಸಲು 60 ಟಿಎಂಸಿ ನೀರು ಬೇಕು. ನ್ಯಾಯಾಧಿಕರಣದ ತಜ್ಞವರದಿ ಪ್ರಕಾರ ತಮಿಳುನಾಡಿಗೆ 395 ಟಿಎಂಸಿ ನೀರು ಅಗತ್ಯ. ಆದರೆ ನ್ಯಾಯಮಂಡಳಿ 458 ಟಿಎಂಸಿ ಮಂಜೂರು ಮಾಡಿ ಉದಾರತೆ ಮೆರೆದಿದೆ!

ನಮ್ಮ ಈ ದುರ್ಗತಿಗೆ ಕೇವಲ ತಮಿಳುನಾಡನ್ನೇ ಬೆಟ್ಟು ಮಾಡುವುದು ಸಾಧುವಲ್ಲ. ನಮ್ಮ ರಾಜಕೀಯ ಮುಖಂಡರೂ ಇದಕ್ಕೆ ಕಾರಣ. ಸ್ವಾತಂತ್ರ್ಯಾನಂತರ ಇದುವರೆಗೂ ಕಾವೇರಿ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳದ್ದು, ನೀರಾವರಿ ಪ್ರದೇಶವನ್ನು ವಿಸ್ತರಿಸಿಕೊಳ್ಳದಿದ್ದುದು ಕರ್ನಾಟಕದ ಘೋರ ಅಪರಾಧ. ನದಿನೀರಿನ ಹೋರಾಟಕ್ಕೆ ಇದ್ದ ಇಚ್ಛಾಶಕ್ತಿ ಅದನ್ನು ಬಳಕೆ ಮಾಡಿಕೊಳ್ಳುವಲ್ಲಿ ನಮ್ಮ ಜನರಿಗೆ ಇಲ್ಲ ಎಂದು ಹಿಂದಿನ ನೀರಾವರಿ ಸಚಿವ ವೈ.ಕೆ.ರಾಮಯ್ಯ ಹೇಳಿದ್ದರು. ಇದು ಅಕ್ಷರಶಃ ನಿಜ. ಅವರು 1983ರಲ್ಲಿ ವಿಧಾನಮಂಡಲದಲ್ಲಿ ಕಾವೇರಿ ವಿವಾದದ ಬಗ್ಗೆ ಮಾಡಿದ್ದ ಸಮಗ್ರ ಭಾಷಣವನ್ನೇ ನ್ಯಾಯಮಂಡಳಿ ಮುಂದೆ ಮಂಡಿಸಿದ್ದರೂ, ನಮಗೆ ನ್ಯಾಯಯುತ ಪಾಲು ಸಿಗುತ್ತಿತ್ತು. ಆದರೆ ಕರ್ನಾಟಕ ಸರ್ಕಾರ ನೇಮಿಸಿಕೊಂಡಿದ್ದ ವಕೀಲರು ಕೂಡಾ ನಮ್ಮ ರಾಜ್ಯದ ಹಿತಾಸಕ್ತಿ ಬಲಿಕೊಟ್ಟರು ಎನ್ನುವುದು ವಾಸ್ತವ.


www.shikarat.com

### 3. ಎತ್ತಿನಹೊಳೆ ಯೋಜನೆ ವರದಾನವೇ?

ಬಣ್ಣದ ಭರವಸೆಗಳ ಆಶಾಗೋಪುರ ನಿರ್ಮಿಸುವಲ್ಲಿ ನಮ್ಮ ರಾಜಕಾರಣಿಗಳು ನಿಸ್ಸೀಮರು. ಅವೈಜ್ಞಾನಿಕ, ಕಾರ್ಯಸಾಧುವಲ್ಲದ, ಪ್ರಕೃತಿ ವಿರೋಧಿ ಯೋಜನೆಗಳನ್ನು ಕಾಗದಗಳಲ್ಲಷ್ಟೇ ತೋರಿಸಿ, ಜನರನ್ನು ನಂಬಿಸಿ ವಂಚಿಸುವ ಹುನ್ನಾರ ನಿರಂತರವಾಗಿ ನಡೆದುಬಂದಿದೆ. ಇಂಥ ರಾಜಕೀಯ ಲಾಭಕ್ಕಾಗಿ ಹುಟ್ಟಿಕೊಂಡ ಕೂಸು ಎತ್ತಿನಹೊಳೆ ಯೋಜನೆ. ನೇತ್ರಾವತಿ ತಿರುವು ಯೋಜನೆ ಎಂಬ ಅಸಂಬದ್ಧ ಯೋಜನೆಗೆ ಕರಾವಳಿ ಪ್ರದೇಶದಲ್ಲಿ ವ್ಯಾಪಕ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಹೆಸರು ಬದಲಿಸಿ ಜಾರಿಗೊಳಿಸುವ ಪ್ರಯತ್ನವೇ ಹೊಸ ಕಲ್ಪನಾಕೂಸು ಎತ್ತಿನಹೊಳೆ ಯೋಜನೆ. ದಕ್ಷಿಣ ಕನ್ನಡ ಮೂಲದ ರಾಜಕಾರಣಿ ವೀರಪ್ಪ ಮೊಯ್ಲಿ ಚಿಕ್ಕಬಳ್ಳಾಪುರದಿಂದ ಸ್ಪರ್ಧಿಸಿರುವುದಕ್ಕೂ, ಎತ್ತಿನಹೊಳೆ ಯೋಜನೆಗೂ ಸಂಬಂಧವಿದೆ. ಬಯಲುಸೀಮೆಯ ಶಾಶ್ವತಬರಪೀಡಿತ ಪ್ರದೇಶಗಳ ಜನತೆಗೆ ಅಂಗೈಯಲ್ಲಿ ಅರಮನೆ ತೋರಿಸಿ, ಮತ ಕೀಳುವ ಹುನ್ನಾರ ಎನ್ನದೇ ವಿಧಿಯಿಲ್ಲ.

ನಮ್ಮಲ್ಲಿ ಯಾವ ಬೃಹತ್ ನೀರಾವರಿ ಯೋಜನೆಗಳು ಯಶಸ್ವಿಯಾಗಿವೆ ಎಂಬುದನ್ನು ವಿಶ್ಲೇಷಿಸಿದರೆ, ಇಂಥ ಯೋಜನೆಗಳ ಹಿಂದಿನ ನೈಜ ಬಂಡವಾಳ ಬಹಿರಂಗವಾಗುತ್ತದೆ. ರಾಜಕಾರಣಿಗಳು, ಗುತ್ತಿಗೆದಾರರು ಮತ್ತು ಅಧಿಕಾರಿಗಳ ಅಪವಿತ್ರ ಮೈತ್ರಿಯ ಅನೈತಿಕ ಕೂಸು ಇಂಥ ಬೃಹತ್ ನೀರಾವರಿ ಯೋಜನೆಗಳು. ಕೃಷ್ಣಾ, ತುಂಗಭದ್ರಾ, ಕಾವೇರಿ, ಕಬಿನಿ ಹೀಗೆ ಯಾವ ಯೋಜನೆಗಳನ್ನು ತೆಗೆದುಕೊಂಡರೂ ಮೇಲಿನ ಮಾತು ಅನ್ವಯಿಸುತ್ತದೆ. ಪರಿಸರಕ್ಕೆ ಹಾನಿ ಮಾಡುವ, ಬಹಳಷ್ಟು ವೆಚ್ಚದಾಯಕ, ಸಾವಿರಾರು ಕುಟುಂಬಗಳ ಜಮೀನು– ಅನ್ನ ಕಸಿಯುವ ಇಂಥ ದೊಡ್ಡ ಯೋಜನೆಗಳ ಬದಲಾಗಿ ಮಳೆನೀರು ಕೊಯ್ಲು, ತಡೆ ಅಣೆ ನಿರ್ಮಾಣ, ಜಲಾನಯನ ಅಭಿವೃದ್ಧಿಯಂಥ ಯೋಜನೆಗಳಿಗೆ ಸರ್ಕಾರ ಏಕೆ ಆದ್ಯತೆ ನೀಡುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ.

ಉದಾಹರಣೆಗೆ ಉತ್ತರ ಕರ್ನಾಟಕದ ಜೀವನಾಧಾರವಾದ ಆಲಮಟ್ಟಿ ಯೋಜನೆಯನ್ನೇ ತೆರೆದುಕೊಳ್ಳೋಣ. ಮೂಲಯೋಜನೆ 1963ರಲ್ಲಿ ಪೂರ್ಣಗೊಳ್ಳಬೇಕಿತ್ತು. ಇದರ ಅಂದಾಜು ವೆಚ್ಚ ಆಗ 60 ಲಕ್ಷ ರೂಪಾಯಿ. ಆದರೆ ಯೋಜನೆ ಪೂರ್ಣಗೊಂಡದ್ದು 2004ರಲ್ಲಿ. ತಗುಲಿದ ಒಟ್ಟು ವೆಚ್ಚ ಸುಮಾರು ಹತ್ತು ಸಾವಿರ ಕೋಟಿ. ಇದು ನಮ್ಮ ಬೃಹತ್ ನೀರಾವರಿ ಯೋಜನೆಗಳ ವಾಸ್ತವ ಚಿತ್ರಣ. ಇಂಥ ಮತ್ತೊಂದು ಯೋಜನೆ ನಮಗೆ ಬೇಕೇ ಎನ್ನುವುದು ರಾಜ್ಯದ ಮುಂದಿರುವ ಪ್ರಶ್ನೆ. ಎತ್ತಿನಹೊಳೆ ಯೋಜನೆಯ ಅಂದಾಜು ವೆಚ್ಚ 12 ಸಾವಿರ ಕೋಟಿ ರೂಪಾಯಿ. ಅಂದರೆ ಕಾಮಗಾರಿ ಪೂರ್ಣಗೊಳ್ಳುವ ವೇಳೆಗೆ ಅದು ಎಷ್ಟಾಗಬಹುದು ಎನ್ನುವುದು ಊಹೆಗೂ ನಿಲುಕದ್ದು.

**ಮೂಲ ಯೋಜನೆ**

ನೀರಾವರಿ ಇಲಾಖೆಯ ನಿವೃತ್ತ ಅಧಿಕಾರಿ ಜಿ.ಎಸ್.ಪರಮಶಿವಯ್ಯ ಅವರ "ಟೋಪೋಶೀಟ್ ಯೋಜನೆ"ಯೇ ನೇತ್ರಾವತಿ ತಿರುವು ಯೋಜನೆ. ಪ್ರತಿವರ್ಷ ಮಳೆಗಾಲದಲ್ಲಿ ವ್ಯರ್ಥವಾಗಿ ಹರಿದು ಸಮುದ್ರ ಸೇರುವ 270 ಟಿಎಂಸಿ ನೀರನ್ನು ಶಾಶ್ವತ ಬರಪೀಡಿತ ಪ್ರದೇಶಗಳಿಗೆ ಹರಿಸುವುದು ಯೋಜನೆಯ ಉದ್ದೇಶ. ಇದರಲ್ಲಿ ಹಾಸನ, ತುಮಕೂರು, ಚಿಕ್ಕಮಗಳೂರು, ಕೋಲಾರ, ಚಿತ್ರದುರ್ಗ ಸೇರಿದಂತೆ ಒಂಬತ್ತು ಜಿಲ್ಲೆಗಳು ಸೇರುತ್ತವೆ. ಅಂದಿನ ಸಂಸದರಾಗಿದ್ದ ಜಿ.ಎಸ್.ಬಸವರಾಜು ಇದನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳಬಹುದು ಎಂಬ ಲೆಕ್ಕಾಚಾರದಿಂದ ಎಸ್.ಎಂ.ಕೃಷ್ಣ ಸರ್ಕಾರದ ಮೇಲೆ ಒತ್ತಡ ತಂದು ಯೋಜನೆ ಅಧ್ಯಯನಕ್ಕೆ ಹಣ ಮಂಜೂರು ಮಾಡಿಸಿದರು. ಈ ಅವಾಸ್ತವ ಯೋಜನೆಗೆ ಎಲ್ಲೆಡೆ ಅಪಸ್ವರ ವ್ಯಕ್ತವಾದಾಗ, ರೂಪುಗೊಂಡದ್ದೇ ಎತ್ತಿನಹೊಳೆ ಯೋಜನೆ.

ನೇತ್ರಾವತಿಯ ಉಪನದಿಯಾದ ಎತ್ತಿನಹೊಳೆಗೆ ಶಿರಾಡಿ ಘಟ್ಟ ಪ್ರದೇಶದಲ್ಲಿ ಅಣೆಕಟ್ಟು ನಿರ್ಮಿಸಿ ಸುಮಾರು 8 ಟಿಎಂಸಿ ನೀರನ್ನು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಹರಿಸಬಹುದು ಎನ್ನುವುದು ಯೋಜನೆಯ ತಿರುಳು. ಇದಕ್ಕೆ ಜನವಿರೋಧ ವ್ಯಕ್ತವಾಗಬಹುದು ಎಂಬ ಮುನ್ಸೂಚನೆಯಿಂದ ಆರಂಭದಿಂದಲೇ ಇದನ್ನು ಕುಡಿಯುವ ನೀರಿನ ಯೋಜನೆ ಎಂದು ಬಿಂಬಿಸಲಾಯಿತು. ಜಲಸಂಪನ್ಮೂಲ ಇಲಾಖೆ ಯೋಜನೆಯ ಸಾಧ್ಯಾಸಾಧ್ಯತೆ ಪರಿಶೀಲಿಸಲು ಸಮೀಕ್ಷೆ ನಡೆಸಿ ವರದಿ ನೀಡುವ ಮುನ್ನವೇ ರಾಜ್ಯ ಸರ್ಕಾರ ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

1973ರಲ್ಲಿ ಪರಮಶಿವಯ್ಯ ಈ ಬಗ್ಗೆ ವರದಿ ಸಿದ್ಧಪಡಿಸಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ್ದರು. ಯೋಜನೆಯ ಏಳು ಹಂತಗಳಲ್ಲಿ ಕೊನೆಯ ಹಂತವೇ ಎತ್ತಿನಹೊಳೆ ಯೋಜನೆ. ಯಡಿಯೂರಪ್ಪ ಸರ್ಕಾರ ಇದಕ್ಕೆ ಅನುಮತಿ ನೀಡಿದ್ದಲ್ಲದೇ, ಅಧ್ಯಯನಕ್ಕೆ ಪೂರಕ ಹಣವನ್ನು ಸದಾನಂದ ಗೌಡ ಮತ್ತು ಶೆಟ್ಟರ್ ಸರ್ಕಾರ ನೀಡಿದವು. ಇದೀಗ ಇಂಥ ಬೃಹತ್ ಯೋಜನೆ ಅನುಷ್ಠಾನಕ್ಕೆ ಸಿದ್ಧರಾಮಯ್ಯ ಸರ್ಕಾರ ಮುಂದಾಗಿದೆ.

ಕಿರು ಜಲಾಶಯ ನಿರ್ಮಿಸಿ ಎತ್ತಿನಹೊಳೆಯಿಂದ 24 ಟಿಎಂಸಿ ನೀರು ಸಂಗ್ರಹಿಸಿ, 850 ಮೀಟರ್ ಎತ್ತರಕ್ಕೆ ಪಂಪ್‌ಮಾಡಿ ಅಲ್ಲಿಂದ 233 ಕಿಲೋಮೀಟರ್ ದೂರದ ತುಮಕೂರಿಗೆ ಕಾಲುವೆ ಮೂಲಕ ಹರಿಸಲಾಗುತ್ತದೆ. ದೇವರಾಯನದುರ್ಗ ಬಳಿ 10 ಟಿಎಂಸಿ ಸಾಮರ್ಥ್ಯದ ಜಲಾಶಯ ನಿರ್ಮಿಸಿ, ಅದಕ್ಕೆ ನೀರು ಪಂಪ್ ಮಾಡಲಾಗುತ್ತದೆ. ನಂತರ 60 ಕಿಲೋಮೀಟರ್ ದೂರದ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ 337 ಕೆರೆಗಳಿಗೆ ಹರಿಸಲಾಗುತ್ತದೆ. ಭವಿಷ್ಯದಲ್ಲಿ ಇಷ್ಟೊಂದು ಪ್ರಮಾಣದ ನೀರನ್ನು ಪಂಪ್ ಮಾಡಲು ಎಷ್ಟು ವಿದ್ಯುತ್ ಬೇಕು ಎಂಬ ಕನಿಷ್ಠ ಪರಿಜ್ಞಾನವೂ ಇಲ್ಲದ ರಾಜಕಾರಣಿಗಳು, ಇನ್ನೇನು ನೀರು ಹರಿದೇಬಿಟ್ಟಿತು ಎಂಬ ವಾತಾವರಣ ಸೃಷ್ಟಿಸಿದ್ದಾರೆ.

**ವಾಸ್ತವ ಏನು?**

ಆದರೆ ವಾಸ್ತವವೇ ಬೇರೆ. ಇಂಥ ಯೋಜನೆ ಗುತ್ತಿಗೆದಾರರ ಜೇಬು ತುಂಬಿಸಬಲ್ಲದೇ ವಿನಃ ಜನರ ದಾಹ ಇಂಗಿಸದು ಎನ್ನುವುದು ವಾಸ್ತವ. ಈ ಜಿಲ್ಲೆಗಳಲ್ಲಿ ಬರಿದಾಗಿರುವ 4879 ಕೆರೆಗಳಿಗೆ ನೀರು ತುಂಬಿಸಲು ಕನಿಷ್ಠ 84.93 ಟಿಎಂಸಿ ನೀರು ಬೇಕು. ಎತ್ತಿನಹೊಳೆಯಿಂದ 24 ಟಿಎಂಸಿ ಹರಿದರೂ ಉಳಿದ ನೀರು ಎಲ್ಲಿಂದ ಎನ್ನುವುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಈ ಜಿಲ್ಲೆಗಳ 1106 ಗ್ರಾಮಗಳಲ್ಲಿ ಕೆರೆಗಳೇ ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಇದು ಪರಿಸರದ ಮೇಲೆ ಬೀರುವ ಪರಿಣಾಮವೂ ಘೋರ. ನೀರು ಸಾಗಿ ಬರುವ ಹಾದಿ ಮಲೆನಾಡಿನ ನಿತ್ಯ ಹರಿದ್ವರ್ಣದ ಕಾಡು. ಅಲ್ಲೆಲ್ಲ ಕಾಮಗಾರಿ ನಡೆಯುವುದರಿಂದ ಹಸಿರು ನಾಶವಾಗುತ್ತದೆ. ಪಶ್ಚಿಮಘಟ್ಟದಲ್ಲಿ ಯಾವುದೇ ಬೃಹತ್ ಯೋಜನೆ ಹಮ್ಮಿಕೊಳ್ಳಬಾರದು



www.shikarat.com

ಎಂದು ಕಸ್ತೂರಿ ರಂಗನ್ ವರದಿ ಹೇಳಿದ್ದು, ಅದನ್ನು ಸರ್ಕಾರ ಒಪ್ಪಿಕೊಂಡಿದೆ. ಆದರೂ ಇಂಥ ಯೋಜನೆಗೆ ಆಡಳಿತಾತ್ಮಕ ಒಪ್ಪಿಗೆ ನೀಡಿರುವುದು ದ್ವಂದ್ವನೀತಿಗೆ ಉದಾಹರಣೆ.
ನೀರಿಗಾಗಿ ಶಾಶ್ವತ ಬರಪೀಡಿತ ಪ್ರದೇಶಗಳ ಜನರ ಮತ್ತು ಕರಾವಳಿ ಜನರ ನಡುವೆ ಯುದ್ಧ ಪರಿಸ್ಥಿತಿ ಹುಟ್ಟುಹಾಕಿರುವುದೇ ಇದುವರೆಗಿನ ಸಾಧನೆ. ಯೋಜನೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗಿದ್ದು, ಜನಾಂದೋಲನ ರೂಪುಗೊಂಡಿದೆ. ಯೋಜನೆಯ ಸಂಭಾವ್ಯ ಫಲಾನುಭವಿ ಜಿಲ್ಲೆಗಳಲ್ಲೂ ಒಮ್ಮತ ಇಲ್ಲ. ವಾಸ್ತವದ ಅರಿವು ಇರುವ ಹಲವು ಮಂದಿ ಮುಖಂಡರು ಮತ್ತು ತಜ್ಞರು ಯೋಜನೆ ವಿರೋಧಿಸಿದ್ದಾರೆ.

**ಪರ್ಯಾಯ ಮಾರ್ಗ**

ಇಂಥ ಬೃಹತ್ ಯೋಜನೆ ಪೂರ್ಣಗೊಳ್ಳಲು ದಶಕಗಳೇ ಬೇಕು. ಅದಕ್ಕೆ ಅಗತ್ಯವಾದ ಸಂಪನ್ಮೂಲ ಕ್ರೋಢೀಕರಣ ಕೂಡಾ ಸವಾಲಿನ ಕೆಲಸ. ಪ್ರಾಕೃತಿಕ ಹರಿವಿಗೆ ವಿರುದ್ಧವಾಗಿ ನದಿ ಅಥವಾ ತೊರೆ ಹರಿಸುವುದರಿಂದ ಯಾವ ದುಷ್ಪರಿಣಾಮವಾಗುತ್ತದೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಅದಾಗ್ಯೂ ರಾಜಕೀಯ ಲಾಭದ ದುರುದ್ದೇಶದಿಂದ ಈ ಅವಾಸ್ತವಿಕ ಯೋಜನೆಗೆ ಸರ್ಕಾರ ಮುಂದಾಗಿದೆ. ನಮ್ಮ ಬದುಕುವ ಹಕ್ಕಿಗೆ ದಕ್ಷಿಣ ಕನ್ನಡ ಜನತೆ ಅಡ್ಡಿಪಡಿಸುತ್ತಿದ್ದಾರೆ ಎಂಬ ಮನೋಭಾವವನ್ನು ಈ ನಾಲ್ಕು ಫಲಾನುಭವಿ ಜಿಲ್ಲೆಗಳ ಜನರಲ್ಲಿ ಮೂಡಿಸುವಲ್ಲಿ ರಾಜಕಾರಣಿಗಳು ಯಶಸ್ವಿಯಾಗಿದ್ದಾರೆ. ಈ ಎಲ್ಲ ಹಿನ್ನೆಲೆಯಿಂದ ನೋಡಿದಾಗ ಎತ್ತಿನಹೊಳೆ ಯೋಜನೆ ಖಂಡಿತಾ ವರದಾನವಾಗದು; ಎಲ್ಲರ ಪಾಲಿಗೆ ಶಾಪ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇದರ ಬದಲಾಗಿ ಮಳೆನೀರು ಕೊಯ್ಲಿನಂಥ ವಿಧಾನಗಳ ಮೂಲಕ ಸ್ಥಳೀಯ ಅಗತ್ಯ ಪೂರೈಸಿಕೊಳ್ಳುವ ಚಿಂತನೆ ನಡೆಸಬೇಕು.
ಈ ನಾಲ್ಕು ಜಿಲ್ಲೆಗಳಲ್ಲಿ ಸಮಗ್ರ ಮಳೆನೀರು ಕೊಯ್ಲು ಯೋಜನೆ ಅನುಷ್ಠಾನಗೊಳಿಸಿದ್ದೇ ಆದರೆ ಎತ್ತಿನಹೊಳೆಯಿಂದ ಪಡೆಯುವ ನೀರಿನ ಹತ್ತುಪಟ್ಟು ನೀರು ಪಡೆಯಬಹುದು ಎನ್ನುತ್ತಾರೆ ಸುರತ್ಕಲ್ ಎನ್ಐಟಿಕೆ ನೀರಾವರಿ ತಜ್ಞ ಎಸ್.ಜಿ.ಮಯ್ಯ ಹೇಳುತ್ತಾರೆ. ಜನರ ಸಹಭಾಗಿತ್ವದಲ್ಲಿ ಜಲಾಯನ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರೆ ಅಲ್ಲಿನ ನೀರಿನ ಸಮಸ್ಯೆಯನ್ನು ಖಂಡಿತಾ ಬಗೆಹರಿಸಬಹುದು. ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿ ಮರುಭೂಮಿಯನ್ನೇ ಹಸಿರುಗೊಳಿಸಿದ ಯಶಸ್ವಿ ಮಾದರಿಗಳು ಇರುವಾಗ ನಮ್ಮ ರಾಜಕಾರಣಿಗಳು ಇನ್ನೂ ಬೃಹತ್ ಯೋಜನೆಗಳ ಹಿಂದೆ ಏಕೆ ಬಿದ್ದಿದ್ದಾರೆ ಎನ್ನುವುದೇ ಯಕ್ಷಪ್ರಶ್ನೆ.

## 4. ವಿದೇಶಿ ಬಂಡವಾಳ: ಸಾಧಕ– ಬಾಧಕಗಳು ( Uploaded in App – 14-05-2015)

ವಿದೇಶಿ ಬಂಡವಾಳ ಸಾಧಕವೋ– ಬಾಧಕವೋ; ಆದರೆ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಅನಿವಾರ್ಯ. ದೇಶದ ಆರ್ಥಿಕ ವ್ಯವಸ್ಥೆಗೆ ವೇಗ ತುಂಬಲು ವಿದೇಶಿ ಬಂಡವಾಳವೇ ಇಂಧನ. ಕಳೆದ ಒಂದು ದಶಕದಲ್ಲಿ ಚೀನಾದ ಅಭಿವೃದ್ಧಿ ನಕ್ಷೆ ಮೇಲೇರಿದ್ದನ್ನು ಗಮನಿಸಿ. ಇಂಥ ಕ್ಷಿಪ್ರ ಬೆಳವಣಿಗೆ ಸಾಧ್ಯವಾದದ್ದು, ವಿದೇಶಿ ಬಂಡವಾಳ ಪ್ರವಾಹೋಪಾದಿಯಲ್ಲಿ ಹರಿದು ಬಂದಿದ್ದರಿಂದ. ಭಾರತವೂ ಒಂದು ದಶಕದಲ್ಲಿ ವಿಶ್ವದ ಸೂಪರ್ ಪವರ್ ಆಗುವ ಕನಸು ಕಾಣುತ್ತಿದೆ. ಇದಕ್ಕೆ ವಿದೇಶಿ ಬಂಡವಾಳ ಪೂರಕವಾಗುತ್ತದೆಯೋ ಮಾರಕವಾಗುತ್ತದೆಯೋ ಕಾದು ನೋಡಬೇಕಾಗಿದೆ.
ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣದಂಥ ಆರ್ಥಿಕ ಸುಧಾರಣೆಗಳಿಂದಾಗಿ ವಿದೇಶಿ ಹೂಡಿಕೆದಾರರಿಗೆ ದೇಶದ ಹೆಬ್ಬಾಗಿಲು ತೆರೆದಿದೆ. ಜಾಗತಿಕ ಮಟ್ಟದಲ್ಲಿ ಆರ್ಥಿಕ ಕುಸಿತದ ನಡುವೆಯೂ ದೇಶದ ಆರ್ಥಿಕ ಪರಿಸ್ಥಿತಿ ಸ್ಥಿರ ಹಾಗೂ ಅಭಿವೃದ್ಧಿ ಪಥದಲ್ಲಿರುವುದರಿಂದ ಭಾರತದ ಮೇಲೆ ಹೂಡಿಕೆದಾರರು ವಿಶ್ವಾಸ ಇರಿಸಿಕೊಂಡಿದ್ದಾರೆ. ಷೇರುಪೇಟೆಯಲ್ಲಿ ಚೇತರಿಕೆ ಹಾಗೂ ನೇರ ಬಂಡವಾಳ ಹೂಡಿಕೆಗೆ ಇದ್ದ ನಿರ್ಬಂಧವನ್ನು ಸರ್ಕಾರ ಸಡಿಲಿಸಿರುವುದರಿಂದ ಹೂಡಿಕೆದಾರರಲ್ಲಿ ಉತ್ಸಾಹ ಮೂಡಿದೆ. ಮೋದಿಯವರ 'ಮೇಕ್ ಇನ್ ಇಂಡಿಯಾ' ಘೋಷಣೆ ವಿದೇಶಗಳಲ್ಲಿ ಮೊಳಗಿದೆ. ಅನಿವಾಸಿ ಭಾರತೀಯರು ತವರುದೇಶದಲ್ಲಿ ಹೂಡಿಕೆಗೆ ಮುಂದಾಗಿದ್ದಾರೆ. ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೆನ್ ಕೂಡಾ ಭಾರತೀಯ ಆರ್ಥಿಕತೆ ಬಗ್ಗೆ ವಿದೇಶಿ ಹೂಡಿಕೆದಾರರಿಗೆ ವಿಶ್ವಾಸ ಮೂಡಿದೆ ಎಂದು ಘೋಷಿಸಿದ್ದಾರೆ.
ಪ್ರಸ್ತುತ ರಕ್ಷಣೆ, ರೈಲ್ವೆ, ಕಬ್ಬಿಣ ಮತ್ತು ಕಲ್ಲಿದ್ದಲು ಗಣಿಗಾರಿಕೆ ಹೊರತುಪಡಿಸಿ ಬಹುತೇಕ ಎಲ್ಲ ಕ್ಷೇತ್ರಗಳಲ್ಲಿ ವಿದೇಶಿ ಹೂಡಿಕೆಗೆ ಅವಕಾಶವಿದೆ. ಚಿಲ್ಲರೆ ಮಾರಾಟ ಕ್ಷೇತ್ರವನ್ನು ವಿದೇಶಿ ಬಂಡವಾಳ ಹೂಡಿಕೆಗೆ ಮುಕ್ತಗೊಳಿಸಿರುವ ಕ್ರಮ ಹಾಗೂ ವಿಮಾಕ್ಷೇತ್ರದ ವಿದೇಶಿ ಹೂಡಿಕೆ ಗರಿಷ್ಠಮಿತಿಯನ್ನು ಶೇಕಡ 26ರಿಂದ 49ಕ್ಕೆ ಏರಿಸಿರುವುದು ವಿದೇಶಿ ಹೂಡಿಕೆ ಹೆಚ್ಚಲು ಕಾರಣವಾಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸುಮಾರು 200 ಶತಕೋಟಿ ಡಾಲರ್ ವಿದೇಶಿ ಬಂಡವಾಳ ನಿರೀಕ್ಷಿಸಲಾಗಿದೆ.
ವಿದೇಶಿ ಬಂಡವಾಳವನ್ನು ನಾವು ಎರಡು ವರ್ಗವಾಗಿ ವಿಭಾಗಿಸಬಹುದು. ಒಂದು ನೇರ ಹೂಡಿಕೆ; ಇನ್ನೊಂದು ಪರೋಕ್ಷ ಹೂಡಿಕೆ. ವೈಯಕ್ತಿಕವಾಗಿ ಲಾಭದ ಉದ್ದೇಶದಿಂದ ಭಾರತೀಯ ಕಂಪನಿಗಳ ಷೇರು ಖರೀದಿಸುವುದು ಪರೋಕ್ಷ ಹೂಡಿಕೆ. ಆದರೆ ನೇರವಾಗಿ ದೇಶದ ಕಂಪನಿಗಳಲ್ಲಿ ಹಣ ತೊಡಗಿಸುವುದು ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಎನಿಸಿಕೊಳ್ಳುತ್ತದೆ. ವಿದೇಶಿ ಕಂಪನಿಯೊಂದು ಭಾರತೀಯ ಕಂಪನಿಯನ್ನು ಖರೀದಿಸುವುದು, ಭಾರತೀಯ ಕಂಪನಿಯ ಷೇರುಗಳಲ್ಲಿ ಸಿಂಹಪಾಲು ಪಡೆಯುವುದು, ಹೊಸ ವಹಿವಾಟು ಆರಂಭಿಸುವುದು, ಭಾರತೀಯ ಕಂಪನಿಗಳ ವಿಸ್ತರಣೆಗೆ ದೊಡ್ಡ ಪ್ರಮಾಣದ ನೆರವು ನೀಡುವುದು. ಜಂಟಿ ಸಹಯೋಗದಲ್ಲಿ ಕಂಪನಿಗಳನ್ನು ನಡೆಸುವುದು ಹೀಗೆ ವಿವಿಧ ರೀತಿಯಲ್ಲಿ ವಿದೇಶಿ ಬಂಡವಾಳ ಹರಿದು ಬರಲು ಸಾಧ್ಯ.
ವಿದೇಶಿ ಬಂಡವಾಳ ದೇಶದ ಅಭಿವೃದ್ಧಿಗೆ ಪೂರಕವೇ ಅಥವಾ ಮಾರಕವೇ ಎನ್ನುವುದು ಚರ್ಚಾವಿಷಯ. ವಿದೇಶಿ ಬಂಡವಾಳ ವಿಚಾರದಲ್ಲಿ ಅರ್ಥಶಾಸ್ತ್ರಜ್ಞರಲ್ಲೇ ಒಮ್ಮತ ಇಲ್ಲ. ಏನೇ ಆದರೂ ವಿದೇಶಿ ಬಂಡವಾಳವಿಲ್ಲದೇ ನಮ್ಮ ಆರ್ಥಿಕ ಪ್ರಗತಿ ಸಾಧ್ಯವಾಗದು ಎನ್ನುವುದು ವಾಸ್ತವ.


www.shikarat.com

ವಿದೇಶಿ ಬಂಡವಾಳದಿಂದ ತಕ್ಷಣಕ್ಕೆ ಆರ್ಥಿಕ ಪ್ರಗತಿಗೆ ವೇಗ ಸಿಗುತ್ತದೆ ಎನ್ನುವುದು ನಿರ್ವಿವಾದ. ಇದು ಸ್ಥಳೀಯ ಕಂಪನಿಗಳೂ ಲಾಭ ತರುತ್ತದೆ. ಹೆಚ್ಚು ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತದೆ. ಇದರಿಂದಾಗಿ ಉದ್ಯೋಗಾವಕಾಶ ಹೆಚ್ಚಿ, ನಿರುದ್ಯೋಗ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಸಂಪನ್ಮೂಲ ವರ್ಗಾವಣೆಯೊಂದಿಗೆ ದೇಶಕ್ಕೆ ಉತ್ತಮ ತಂತ್ರಜ್ಞಾನ ಹರಿದುಬರುತ್ತದೆ. ಈ ಮೂಲಕ ಸ್ಥಳೀಯ ಉದ್ಯೋಗಿಗಳ ಜ್ಞಾನ– ಕೌಶಲ ಹೆಚ್ಚುತ್ತದೆ. ಇದು ವಿದೇಶಿ ಬಂಡವಾಳದ ನೇರ ಪ್ರಯೋಜನಗಳು. ಇವೆಲ್ಲದರ ಪರಿಣಾಮವಾಗಿ ಉತ್ಪಾದಕತೆ ಹೆಚ್ಚಿ ಆರ್ಥಿಕತೆ ಬಲಗೊಳ್ಳುತ್ತಾ ಹೋಗುತ್ತದೆ.

ಆದರೆ ವಿದೇಶಿ ಬಂಡವಾಳ ವಿರೋಧಿಸುವ ವರ್ಗ ಇದಕ್ಕೆ ವ್ಯತಿರಿಕ್ತ ವಾದ ಮುಂದಿಡುತ್ತಾರೆ. ವಿದೇಶಿ ಬಂಡವಾಳ ಅಧಿಕ ಪ್ರಮಾಣದಲ್ಲಿ ಹರಿದುಬರುವುದರಿಂದ ಸ್ಥಳೀಯ ಹಾಗೂ ಸಣ್ಣ ಹೂಡಿಕೆದಾರರಿಗೆ ಅವಕಾಶದ ಬಾಗಿಲು ಮುಚ್ಚಿದಂತಾಗುತ್ತದೆ. ಸ್ಥಳೀಯ ಕಂಪನಿಗಳು ಏಕಾಏಕಿ ವಿದೇಶಿ ತಂತ್ರಜ್ಞಾನ ಹಾಗೂ ಬಂಡವಾಳದ ಜತೆ ಪೈಪೋಟಿಗೆ ಇಳಿಯಬೇಕಾದ್ದರಿಂದ ಸ್ಥಳೀಯ ಕೈಗಾರಿಕೆಗಳಿಗೆ ಮಾರಕವಾಗುವ ಅಪಾಯವೂ ಇದೆ ಎಂದು ವಾದಿಸುತ್ತಾರೆ. ಇದು ಮತ್ತೆ ನಿರುದ್ಯೋಗಕ್ಕೆ ಅವಕಾಶ ಮಾಡಿಕೊಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ವಿದೇಶಿ ವಿನಿಮಯ ದರ ವ್ಯತ್ಯಯದಿಂದ ಆರ್ಥಿಕತೆ ಅಲ್ಲೋಲ– ಕಲ್ಲೋಲವಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸುತ್ತಾರೆ.

ಚಿಲ್ಲರೆ ಮಾರಾಟ ಕ್ಷೇತ್ರದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ ಮಾಡಿಕೊಟ್ಟಿರುವುದು ದೇಶದಲ್ಲಿ ಹೆಚ್ಚು ಚರ್ಚೆಯಲ್ಲಿರುವ ವಿಷಯ. ಭಾರತದಲ್ಲಿ ವಾರ್ಷಿಕ ಚಿಲ್ಲರೆ ಮಾರಾಟ ಪ್ರಮಾಣ 28 ಶತಕೋಟಿ ಡಾಲರ್‌ನಷ್ಟಿದ್ದು, 2020ರ ವೇಳೆಗೆ ಈ ಪ್ರಮಾಣ 260 ಶತಕೋಟಿ ಡಾಲರ್‌ಗೆ ಏರುವ ನಿರೀಕ್ಷೆ ಇದೆ. ಗ್ರಾಹಕರ ದೃಷ್ಟಿಯಿಂದ ನೋಡಿದರೆ ಚಿಲ್ಲರೆ ಕ್ಷೇತ್ರಕ್ಕೆ ವಾಲ್‌ಮಾರ್ಟ್‌ನಂಥ ದೈತ್ಯ ಕಂಪನಿಗಳು ಲಗ್ಗೆ ಇಡುವುದರಿಂದ ಉತ್ತಮ ಗುಣಮಟ್ಟದ ಗ್ರಾಹಕ ಉತ್ಪನ್ನಗಳು ಕಡಿಮೆ ಬೆಲೆಯಲ್ಲಿ ಸಿಗುತ್ತವೆ. ರೈತರಿಗೂ ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗುತ್ತದೆ. ಉದ್ಯೋಗವಕಾಶ ಸೃಷ್ಟಿಯಾಗುತ್ತದೆ ಎಂದು ಒಂದು ವರ್ಗ ಹೇಳುತ್ತದೆ.

ಆದರೆ ಇದು ಸ್ಥಳೀಯ ವ್ಯಾಪಾರಿಗಳಿಗೆ ಮಾರಕ ಎನ್ನುವುದು ಎಫ್‌ಡಿಐ ವಿರೋಧಿಗಳ ವಾದ. ಸಣ್ಣ ವ್ಯಾಪಾರಿಗಳು ನೆಲಕಚ್ಚುವುದರಿಂದ ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತದೆ. ರೈತರು ಇಂಥ ದೈತ್ಯ ಕಂಪನಿಗಳ ದಾಸರಾಗಬೇಕಾಗುತ್ತದೆ ಎನ್ನಲಾಗುತ್ತಿದೆ. ಆದರೆ ಸರ್ಕಾರ ಕಣ್ಣುಮುಚ್ಚಿಕೊಂಡು ಎಫ್‌ಡಿಐಗೆ ಅವಕಾಶ ನೀಡಿಲ್ಲ ಎನ್ನುವುದು ವಾಸ್ತವ. ದೇಶದ ಹಿತಾಸಕ್ತಿ ಕಾಪಾಡುವ ಸಲುವಾಗಿ ಬಹಳಷ್ಟು ನಿರ್ಬಂಧಗಳನ್ನು ಇರಿಸಲಾಗಿದೆ. ಉದಾಹರಣೆಗೆ ಕನಿಷ್ಠ 100 ದಶಲಕ್ಷ ಡಾಲರ್ ಬಂಡವಾಳ ಹೂಡಬೇಕು; 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳಲ್ಲಷ್ಟೇ ಮಳಿಗೆ ತೆರೆಯಬೇಕು, ಶೇಕಡ 50ರಷ್ಟು ಬಂಡವಾಳವನ್ನು ಕಟ್ಟಡ, ದಾಸ್ತಾನು ಉಗ್ರಾಣದಂಥ ಮೂಲಸೌಕರ್ಯ ಅಭಿವೃದ್ಧಿಗೆ ವಿನಿಯೋಗಿಸಬೇಕು, ರಾಜ್ಯ ಸರ್ಕಾರಗಳ ಅನುಮತಿಯನ್ನು ಕಡ್ಡಾಯವಾಗಿ ಪಡೆಯಬೇಕು. ಆದ್ದರಿಂದ ಚಿಲ್ಲರೆ ಕ್ಷೇತ್ರದಲ್ಲಿ ವಿದೇಶಿ ಕಂಪನಿಗಳು ಬಂದರೆ ಸ್ಥಳೀಯ ವ್ಯಾಪಾರಿಗಳು ಸರ್ವನಾಶವಾಗುತ್ತಾರೆ ಎಂಬ ವಾದದಲ್ಲಿ ಹುರುಳಿಲ್ಲ.

ಚಿಲ್ಲರೆ ಕ್ಷೇತ್ರಕ್ಕೆ ವಿದೇಶಿ ಕಂಪನಿಗಳು ಬರುವುದರಿಂದ ದೇಶದಲ್ಲಿ ಕನಿಷ್ಠ 40 ಲಕ್ಷ ನೇರ ಉದ್ಯೋಗ ಹಾಗೂ 60 ಲಕ್ಷ ಪರೋಕ್ಷ ಉದ್ಯೋಗ ಸೃಷ್ಟಿಯಾಗಲಿದೆ. ಸರ್ಕಾರಕ್ಕೆ ಆದಾಯವೂ ಹೆಚ್ಚಲಿದ್ದು, ಸುಮಾರು 25 ದಿಂದ 30 ದಶಲಕ್ಷ ಡಾಲರ್ ಹೆಚ್ಚುವರಿ ಆದಾಯ ನಿರೀಕ್ಷಿಸಲಾಗಿದೆ. ಇದು ದೇಶದ ಇತರ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗವಾಗಲಿದೆ.

ಎಫ್‌ಡಿಐ ವಿರೋಧಿಗಳ ಮತ್ತೊಂದು ವಾದ ಉದ್ಯೋಗ ಸೃಷ್ಟಿಗೆ ಸಂಬಂಧಿಸಿದ್ದು. ವಿದೇಶಿ ಬಂಡವಾಳ ಹರಿದು ಬರುವುದರಿಂದ ಹೊಸ ಉದ್ಯೋಗಾವಕಾಶ ಸೃಷ್ಟಿಯಾಗದು. ಅಸಂಘಟಿತ ವಲಯದ ಕೆಲ ಕಾರ್ಮಿಕರು ಸಂಘಟಿತ ವಲಯಕ್ಕೆ ವಲಸೆ ಹೋಗುತ್ತಾರೆಯೇ ವಿನಃ ಹೊಸದಾಗಿ ಉದ್ಯೋಗ ಸೃಷ್ಟಿಯಾಗುವುದಿಲ್ಲ ಎಂದು ಪ್ರತಿಪಾದಿಸುತ್ತಾರೆ.

ವಿದೇಶಿ ಬಂಡವಾಳದ ಜತೆಗೆ ಉನ್ನತ ತಂತ್ರಜ್ಞಾನ ಕೂಡಾ ದೇಶಕ್ಕೆ ಹರಿದುಬರುವುದರಿಂದ ಉತ್ಪಾದಕತೆ ಹೆಚ್ಚಲೂ ಇದು ಅನುಕೂಲವಾಗಲಿದೆ. ಇದರ ಜತೆಗೆ ಉತ್ಪಾದನಾ ವೆಚ್ಚವೂ ತಗ್ಗುತ್ತದೆ. ಕಳೆದ ಒಂದು ದಶಕದಲ್ಲಿ ವಿದೇಶಿ ಬಂಡವಾಳದ ಲಾಭ ಪಡೆದು, ಉತ್ಪಾದಕತೆ ಹೆಚ್ಚಿಸಿಕೊಂಡು ಜಾಗತಿಕ ಮಟ್ಟದಲ್ಲಿ ಶ್ರೀಮಂತ ರಾಷ್ಟ್ರಗಳ ಜೊತೆ ಪೈಪೋಟಿ ನೀಡುವ ಹಂತಕ್ಕೆ ಬೆಳೆದಿರುವ ಚೀನಾದ ಉದಾಹರಣೆಯನ್ನು ನಾವು ಗಮನಿಸಬಹುದು. ಆದರೆ ಒಂದೇ ಕ್ಷೇತ್ರಕ್ಕೆ ವಿದೇಶಿ ಬಂಡವಾಳ ಹರಿದುಬಂದರೆ ಅದರಿಂದ ಅಪಾಯವೇ ಹೆಚ್ಚು. ಈ ಎಲ್ಲ ವಿವೇಚನೆಗಳಿಂದ ವಿದೇಶಿ ಬಂಡವಾಳ ಆಕರ್ಷಿಸಿದರೆ, ಖಂಡಿತವಾಗಿಯೂ ನಮ್ಮ ಆರ್ಥಿಕತೆ ಬೆಳೆಯುತ್ತದೆ. ಆದರೆ ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳೆಹೊಡೆಯದಂತೆ ಎಚ್ಚರ ವಹಿಸಬೇಕು.

## 5. ಕಾನೂನು– ಸುವ್ಯವಸ್ಥೆ ಕಾಪಾಡುವಲ್ಲಿ ಮಾಧ್ಯಮಗಳ ಪಾತ್ರ

ಮಾಧ್ಯಮ ಕ್ಷೇತ್ರ ಪ್ರಜಾಪ್ರಭುತ್ವ ವ್ಯವಸ್ಥೆಯ ನಾಲ್ಕನೇ ಅಂಗ; ಕಾರ್ಯಾಂಗ, ನ್ಯಾಯಾಂಗ ಹಾಗೂ ಶಾಸಕಾಂಗಗಳ ಕಾರ್ಯವಿಮರ್ಶೆ ಮಾಡುವ ಮೂಲಕ ಪ್ರಜಾಪ್ರಭುತ್ವದ ಕಾವಲುಗಾರನಾಗಿ ಮಾಧ್ಯಮ ಕಾರ್ಯನಿರ್ವಹಿಸುತ್ತದೆ. ರಚನಾತ್ಮಕ ವಿರೋಧ ಪಕ್ಷ ಎಂದು ಹೊಗಳಿಸಿಕೊಂಡಿರುವ ಮಾಧ್ಯಮಗಳಿಗೆ ಸಾಮಾಜಿಕ ಬದ್ಧತೆಯೂ ಇದೆ. ಪ್ರಸ್ತುತ ಸನ್ನಿವೇಶದಲ್ಲಿ ಸಮೂಹ ಮಾಧ್ಯಮಗಳು ಸಮಾಜದ ಎಲ್ಲ ಆಗು ಹೋಗುಗಳ ಮೇಲೆ ಪರಿಣಾಮ ಬೀರುವ ಸಾಮರ್ಥ್ಯ ಹೊಂದಿದ್ದು, ಮಾಧ್ಯಮಗಳ ಜವಾಬ್ದಾರಿ ಹಿಂದೆಂದಿಗಿಂತಲೂ ಅಧಿಕವಾಗಿದೆ. ಈ ಹಿನ್ನೆಲೆಯಲ್ಲಿ ಕಾನೂನು– ಸುವ್ಯವಸ್ಥೆ ಕಾಪಾಡುವಲ್ಲಿ ಮಾಧ್ಯಮಗಳ ಪಾತ್ರವೇನು ಎಂಬುದನ್ನು ವಿಶ್ಲೇಷಿಸಬೇಕಾಗುತ್ತದೆ.

ವಿವಿಧತೆಯಲ್ಲಿ ಏಕತೆ ಅಂದರೆ ವಿಭಿನ್ನ ಭಾಷೆ, ಸಂಸ್ಕೃತಿ, ಜಾತಿ, ಧರ್ಮಗಳ ಹಿನ್ನೆಲೆ ಇರುವ ಭಾರತೀಯ ಸಮಾಜದಲ್ಲಿ ಕೋಮು ಸಾಮರಸ್ಯವೇ ಕಾನೂನು– ಸುವ್ಯವಸ್ಥೆಯ ಮೂಲ. ಕೋಮು ಸಾಮರಸ್ಯ ಹಾಗೂ ಕಾನೂನು– ಸುವ್ಯವಸ್ಥೆಗೆ ನಿಕಟ ನಂಟು ಇದೆ. ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ, ಬೌದ್ಧ, ಸಿಖ್ಖರು ಹೀಗೆ ವಿವಿಧ ಧರ್ಮಗಳಿಗೆ ಸೇರಿದ ಮಂದಿ ಸಾಮರಸ್ಯದಿಂದ ಬಾಳ್ವೆ ನಡೆಸುತ್ತಿರುವುದೇ ಭಾರತದ ವೈಶಿಷ್ಟ್ಯ. ಆದರೆ ಕೋಮುಸೂಕ್ಷ್ಮ ವಿಷಯಗಳು ಬಂದಾಗ ಭಾರತವೆಂಬ ಸಾಗರದಲ್ಲಿ ಅಶಾಂತಿಯ ಅಲೆಗಳು ಅಪ್ಪಳಿಸುವುದನ್ನು ನಾವು



www.shikarat.com

ನೋಡಿದ್ದೇವೆ. ಈ ಹಿನ್ನೆಲೆಯಲ್ಲಿ ಕೋಮು ಸಾಮರಸ್ಯ ಇಡೀ ದೇಶದ ಶಾಂತಿ, ಸುವ್ಯವಸ್ಥೆಯ ಮೂಲ ಮಂತ್ರ. ದೇಶದ ಏಕತೆ, ಸಮಗ್ರತೆ, ಆಂತರಿಕ ಭದ್ರತೆಗೂ ಕೋಮುಸೌಹಾರ್ದವೇ ಬೆನ್ನೆಲುಬು.

ದೇಶದಲ್ಲಿ ಕೋಮು ಭಾವನೆಗೆ ಧಕ್ಕೆ ತರಬಹುದಾದ ಅನೇಕ ವಿವಾದಾತ್ಮಕ ವಿಷಯಗಳಿವೆ. ರಾಮ ಜನ್ಮಭೂಮಿ– ಬಾಬರಿ ಮಸೀದಿ ವಿವಾದದಿಂದ ಹಿಡಿದು, ಪುಟ್ಟ ಹಳ್ಳಿಯೊಂದರ ಪ್ರಾರ್ಥನಾ ಮಂದಿರದವರೆಗೂ ಪ್ರತಿಯೊಂದೂ ಕೋಮುಸೂಕ್ಷ್ಮ ವಿಷಯಗಳೇ. ಇದರ ಜತೆಗೆ ಸಾಮಾಜಿಕ– ಆರ್ಥಿಕ ಕಾರಣ, ನಿರುದ್ಯೋಗ ಸಮಸ್ಯೆಯಿಂದಾಗಿ ಹಣ ಸಂಪಾದನೆಗೆ ವಾಮ ಮಾರ್ಗ ಅನುಸರಿಸುವ ಪ್ರವೃತಿ ಹೆಚ್ಚುತ್ತಿರುವುದೂ ಸಾಮಾಜಿಕ ಅಶಾಂತಿಗೆ ಮತ್ತೊಂದು ಕಾರಣ. ಆಧುನಿಕ ಜೀವನಶೈಲಿ ಮತ್ತು ಪಾಶ್ಚಾತ್ಯ ಸಂಸ್ಕೃತಿ ಪ್ರಭಾವದಿಂದಾಗಿ ಹಲ್ಲೆ, ಕೊಲೆ, ಸುಲಿಗೆ, ಅತ್ಯಾಚಾರ ಘಟನೆಗಳೂ ಹೆಚ್ಚುತ್ತಿದ್ದು, ಕಾನೂನು– ಸುವ್ಯವಸ್ಥೆ ಹದಗೆಡಲು ಈ ಅಂಶಗಳೂ ಕಾರಣವಾಗುತ್ತಿವೆ. ಈ ಹಿನ್ನೆಲೆಯಿಂದ ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಮಾಧ್ಯಮಗಳ ಪಾತ್ರ ಮಹತ್ವದ್ದು.

ಸ್ವಾತಂತ್ರ್ಯಾನಂತರ ಇದುವರೆಗೆ ಸುಮಾರು 7500 ಕೋಮುಗಲಭೆಗಳು ದೇಶದಲ್ಲಿ ಸಂಭವಿಸಿವೆ ಎಂದು ಕೇಂದ್ರ ತನಿಖಾ ಸಂಸ್ಥೆ ಅಂದಾಜು ಮಾಡಿದೆ. ಆದರೂ ಮಾಧ್ಯಮಗಳು ಸಂಯಮ ಮೆರೆದಿದ್ದರಿಂದ ಹೆಚ್ಚಿನ ಅನಾಹುತ ತಪ್ಪಿದೆ.

**ಮಾಧ್ಯಮ ಹೊಣೆಗಾರಿಕೆ**

ಆಧುನಿಕ ಸಮಾಜದಲ್ಲಿ ಯಾವುದೇ ಅಭಿಪ್ರಾಯ ಮೂಡಿಸುವಲ್ಲಿ ಮಾಧ್ಯಮಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಪ್ರಭಾವಿ, ಪರಿಣಾಮಕಾರಿ, ವಿಸ್ತೃತ, ಅಗ್ಗ ಹಾಗೂ ಕ್ಷಿಪ್ರ ಕಾರ್ಯಾಚರಣೆಯಿಂದಾಗಿ ಮಾಧ್ಯಮಗಳ ಮಹತ್ವ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಬಹುತೇಕ ಸಾರ್ವಜನಿಕ ನಿರ್ಧಾರಗಳು ಮಾಧ್ಯಮಗಳಿಂದಲೇ ರೂಪಿಸಲ್ಪಡುತ್ತವೆ. ಕೋಮು ಸೂಕ್ಷ್ಮ ಪ್ರಕರಣಗಳಿಗೆ ವಿವಿಧ ಆಯಾಮಗಳಿದ್ದರೂ ಮಾಧ್ಯಮ ಇದರಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಸುದ್ದಿ ಸಂಗ್ರಹ ಮತ್ತು ಪ್ರಸಾರವೇ ಮಾಧ್ಯಮಗಳ ಪ್ರಮುಖ ಕಾರ್ಯವಾಗಿದ್ದು, ಕೋಮುಸೌಹಾರ್ದತೆ ಕಾಪಾಡುವಲ್ಲಿ ಇದು ಮಹತ್ವದ್ದು. ಲೇಖನಿ ಖಡ್ಗಕ್ಕಿಂತಲೂ ಹರಿತ ಎನ್ನುವುದು ಹಳೆಯ ನಾಣ್ನುಡಿಯಾಗಿದ್ದರೂ, ಇಂದಿಗೂ ಪ್ರಸ್ತುತ. ಇದೇ ಕಾರಣದಿಂದ ಆಧುನಿಕ ಸಮಾಜದಲ್ಲಿ ಮಾಧ್ಯಮ ಪ್ರಭಾವಶಾಲಿ.

ಟೆಲಿವಿಷನ್, ಸುದ್ದಿವಾಹಿನಿಗಳು, ಪತ್ರಿಕೆ, ನಿಯತಕಾಲಿಕ, ರೇಡಿಯೊ, ಮೊಬೈಲ್, ವೆಬ್‌ಪೋರ್ಟಲ್, ಇಂಟರ್‌ನೆಟ್, ಇ–ಮೇಲ್ ಹೀಗೆ ಸಾಂಪ್ರದಾಯಿಕ ಹಾಗೂ ಆಧುನಿಕ ಮಾಧ್ಯಮಗಳು ಜಗತ್ತನ್ನು ಕಿರಿದುಗೊಳಿಸಿವೆ. ಆದ್ದರಿಂದಲೇ 21ನೇ ಶತಮಾನ ಸಂಪರ್ಕಯುಗ. ಈ ಕಾರಣದಿಂದ ಸಣ್ಣ ಸುದ್ದಿಯೂ ಸಮಾಜದ ಮೇಲೆ ದೊಡ್ಡ ಪರಿಣಾಮ ಬೀರುವ ಸಾಮರ್ಥ್ಯ ಹೊಂದಿದೆ. ಭಾರತದಂಥ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಮತ್ತು ಸಾರ್ವಜನಿಕರ ನಡುವಿನ ಕೊಂಡಿಯೇ ಮಾಧ್ಯಮ. ಸಂಘರ್ಷ ಮತ್ತು ಅಶಾಂತಿಯ ಸಂದರ್ಭದಲ್ಲಂತೂ ಮಾಧ್ಯಮಗಳ ಪಾತ್ರ ಇನ್ನಷ್ಟು ಮಹತ್ತರ.

ದೇಶದ ಏಕತೆ, ಸಮಗ್ರತೆ ಕಾಪಾಡುವಲ್ಲಿ ಮಾಧ್ಯಮ ಅನಾದಿ ಕಾಲದಿಂದಲೂ ತನ್ನ ಕೊಡುಗೆ ನೀಡುತ್ತಾ ಬಂದಿದೆ. ಕೋಮುಸಾಮರಸ್ಯ ಕಾಪಾಡುವ ಮೂಲಕ ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಭಾರತೀಯರನ್ನು ಒಗ್ಗೂಡಿಸಿದ ಹೆಮ್ಮೆಯೂ ಮಾಧ್ಯಮಗಳಿಗೆ ಸಲ್ಲಬೇಕು. 1905ರಲ್ಲಿ ಬಂಗಾಳದ ವಿಭಜನೆ ವಿರುದ್ಧ ಸಾರ್ವಜನಿಕ ಅಭಿಪ್ರಾಯ ರೂಪಿಸಿದ್ದೂ ಭಾರತೀಯ ಮಾಧ್ಯಮಗಳೇ. ಮುದ್ರಣ ಮಾಧ್ಯಮದ ಏಕಸ್ವಾಮ್ಯವಿದ್ದ ಆ ಕಾಲದಲ್ಲಿ ಬ್ರಿಟಿಷನ್ ವಿಭಜನೆ ನಿರ್ಧಾರವನ್ನು ಪತ್ರಿಕೆಗಳು ಒಕ್ಕೊರಲಿನಿಂದ ವಿರೋಧಿಸಿದವು. ನಂತರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧೀಜಿಯವರು ತಮ್ಮ ಅಭಿಪ್ರಾಯ– ಅನಿಸಿಕೆಗಳನ್ನು ಸಾರ್ವಜನಿಕರಿಗೆ ವ್ಯಾಪಕವಾಗಿ ಪ್ರಚುರಪಡಿಸುವ ಸಲುವಾಗಿಯೇ "ಯಂಗ್ ಇಂಡಿಯಾ", "ಹರಿಜನ್" ಪತ್ರಿಕೆಗಳನ್ನು ಆರಂಭಿಸಿದರು.

ಕೋಮುಸೌಹಾರ್ದ ಮತ್ತು ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ಮೌಲಾನಾ ಅಬುಲ್ ಕಲಾಂ ಆಜಾದ್, ಅಲ್ ಹಿಲಾಲ್ ಪತ್ರಿಕೆ ಆರಂಭಿಸಿದರು. ಕೋಮು ಸಾಮರಸ್ಯ ಕೆಡಿಸುವ ಹುನ್ನಾರಗಳ ವಿರುದ್ಧ ಜನತೆಯನ್ನು ಬಡಿದೆಬ್ಬಿಸಿದ ಕೀರ್ತಿ ಈ ಪತ್ರಿಕೆಗೆ ಸಲ್ಲುತ್ತದೆ. ನಂತರವೂ ರಾಮಜನ್ಮಭೂಮಿ ವಿವಾದ, 2002ರ ಗುಜರಾತ್ ಹಿಂಸಾಚಾರ, ಗೋಧ್ರಾ ಘಟನೆ, 2005ರಿಂದೀಚೆಗೆ ನಡೆಯುತ್ತಿರುವ ಉಗ್ರರ ದಾಳಿ, ವಾರಾಣಾಸಿ ಬಾಂಬ್ ಸ್ಫೋಟ, ಜಾಮಾ ಮಸೀದಿ ಸ್ಫೋಟ, ಮುಂಬೈ ರೈಲು ಸ್ಫೋಟ, ದೆಹಲಿ, ಅಹ್ಮದಾಬಾದ್ ದಾಳಿ, ಮುಂಬೈ ಉಗ್ರರ ದಾಳಿ, ಕಾಶ್ಮೀರ ಹಿಂಸಾಚಾರ ಮತ್ತಿತರ ಸಂದರ್ಭದಲ್ಲಿ ಮಾಧ್ಯಮಗಳು ಕೋಮುಸೌಹಾರ್ದ ಕಾಪಾಡುವ ನಿಟ್ಟಿನಲ್ಲಿ ಗಣನೀಯ ಕೊಡುಗೆ ನೀಡಿವೆ.

ಸಂತ್ರಸ್ತರ ಪ್ರದೇಶಗಳಿಗೆ ತೆರಳಿ, ಕೋಮುಸೂಕ್ಷ್ಮ ಪರಿಸ್ಥಿತಿಯಲ್ಲೂ ವಿವಿಧ ಸಮುದಾಯ– ಧರ್ಮದವರು ಒಗ್ಗಟ್ಟಿನಿಂದ ಬಾಳ್ವೆ ನಡೆಸುತ್ತಿರುವುದನ್ನು ಸಮಾಜಕ್ಕೆ ತೋರಿಸಿ, ಕೋಮುದಳ್ಳುರಿಯ ಜ್ವಾಲೆ ನಂದಿಸಲು ಪ್ರಯತ್ನಿಸಿವೆ.

ಆದರೆ ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳನ್ನು ಕೋಮು ಪ್ರಚೋದಕ ವಿಷಯಗಳಿಗೆ ದುರ್ಬಳಕೆ ಮಾಡಿಕೊಳ್ಳುವ ಪ್ರಕರಣಗಳು ವ್ಯಾಪಕವಾಗುತ್ತಿವೆ. ಇಂಟರ್‌ಪೋಲ್‌ನ 83ನೇ ವಾರ್ಷಿಕ ಅಧಿವೇಶನ ಉದ್ದೇಶಿಸಿ ಮಾತನಾಡಿದ ಗೃಹಸಚಿವ ರಾಜನಾಥಸಿಂಗ್, ಸಾಮಾಜಿಕ ಜಾಲತಾಣಗಳಲ್ಲಿನ ಮಾಹಿತಿಯನ್ನು ಕಸಿದುಕೊಂಡು ದುರ್ಬಳಕೆ ಮಾಡಲಾಗುತ್ತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕುಚೋದ್ಯದಿಂದ ಮಾಡುವ ಇಂಥ ಕೃತ್ಯಗಳನ್ನು ತಡೆಯಲು ಸೈಬರ್ ಕಾನೂನಿನ ಸೆಕ್ಷನ್ 66ಎ ಯಲ್ಲಿ ಅವಕಾಶವಿದೆ.

ಇತ್ತೀಚಿನ ದಿನಗಳಲ್ಲಿ ಕೆಲ ಮಾಧ್ಯಮಗಳು ಕೋಮುಸೂಕ್ಷ್ಮ ವಿಚಾರಗಳನ್ನು ವೈಭವೀಕರಿಸಿದ ನಿದರ್ಶನಗಳೂ ಇವೆ. ಉದಾಹರಣೆಗೆ ಕಳೆದ ಲೋಕಸಭಾ ಚುನಾವಣೆ ಸಂದರ್ಭ ಉತ್ತರಪ್ರದೇಶದ ಮುಜಾಫರ್‌ನಗರದಲ್ಲಿ ನಡೆದ ಕೋಮುಗಲಭೆಯನ್ನು ವೈಭವೀಕರಿಸಿ ಒಂದು ಪಕ್ಷದ ಪರ ಮತ ಧ್ರುವೀಕರಣಕ್ಕೂ ಪ್ರಯತ್ನ ನಡೆದಿದೆ. ಗೋಧ್ರಾ ಘಟನೆಯಲ್ಲೂ ಕೆಲ ಪತ್ರಿಕೆಗಳ ಕಾರ್ಯವೈಖರಿ ಸಂಶಯಾಸ್ಪದ. ಮೋದಿ ಸರ್ಕಾರದ ವಿರುದ್ಧ ವರದಿ ಮಾಡಿದ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಸಂಪಾದಕ ಶೇಖರ್ ಗುಪ್ತಾ ಅವರಿಗೆ ಬೆದರಿಕೆ ಕರೆಗಳೂ ಬಂದಿತ್ತು ಎನ್ನುವುದು ಉಲ್ಲೇಖಾರ್ಹ.

ದೃಶ್ಯ ಮಾಧ್ಯಮಗಳಲ್ಲಂತೂ ಇತ್ತೀಚಿನ ದಿನಗಳಲ್ಲಿ ಪೈಪೋಟಿ ಹೆಸರಲ್ಲಿ ಹಿಂಸೆ, ಕೋಮುಗಲಭೆಯಂಥ ಘಟನೆಗಳ ವೈಭವೀಕರಣ ನಡೆಯುತ್ತದೆ. ಭಾರತೀಯ ಪತ್ರಿಕಾ ಮಂಡಳಿಯ ನೀತಿಸಂಹಿತೆ ಪ್ರಕಾರ, ಕೋಮುಸೂಕ್ಷ್ಮ ವಿಷಯಗಳ ಸಂದರ್ಭ, ಕೋಮುಗಳ ಹೆಸರು



www.shikarat.com

ಅಥವಾ ವ್ಯಕ್ತಿಯ ಹೆಸರು ಉಲ್ಲೇಖಿಸುವಂತಿಲ್ಲ. ಆದರೆ ಇಂದು ಪತ್ರಿಕೆಗಳೂ ಸೇರಿದಂತೆ ಎಲ್ಲ ಮಾಧ್ಯಮಗಳು ಸಂತ್ರಸ್ತರ ಕುಟುಂಬದ ಸಂದರ್ಶನವನ್ನೂ ಪ್ರಕಟಿಸುತ್ತವೆ. ಮಾಧ್ಯಮಗಳ ಉದ್ದೇಶ ಗಲಭೆ ಸಂತ್ರಸ್ತರ ಸಾಂತ್ವನ ಆಗಿದ್ದರೂ, ಇದು ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಮತ್ತೊಂದು ಕೋಮಿನವರನ್ನು ಪ್ರಚೋದಿಸುವ ಸಾಧ್ಯತೆಗಳನ್ನೂ ಅಲ್ಲಗಳೆಯುವಂತಿಲ್ಲ. ಈ ನಿಟ್ಟಿನಲ್ಲಿ ಮಾಧ್ಯಮಗಳಿಗೆ ಅಂಕುಶ ಹಾಕಬೇಕಾದ ಪತ್ರಿಕಾ ಮಂಡಳಿ ಮೂಕಸಾಕ್ಷಿಯಾಗುತ್ತಿರುವುದು ವ್ಯವಸ್ಥೆಯ ದುರಂತ. ಏಕೆಂದರೆ ಪತ್ರಿಕಾ ಮಂಡಳಿ ಹಲ್ಲಿಲ್ಲದ ಹಾವು.
ಕೋಮುಸೂಕ್ಷ್ಮ ವಿಷಯಗಳಲ್ಲಿ ಕಟ್ಟುನಿಟ್ಟಿನ ನೀತಿಸಂಹಿತೆ ಪಾಲಿಸುವಂತೆ ನಿಗಾ ವಹಿಸಲು ಪತ್ರಿಕಾ ಮಂಡಳಿಗೆ ಅಗತ್ಯ ಅಧಿಕಾರ ನೀಡಿದಾಗ ಮಾತ್ರ ಮಾಧ್ಯಮಗಳು ಹೆಚ್ಚು ಜವಾಬ್ದಾರಿಯುತವಾಗಿ ಕೆಲಸ ಮಾಡಲು ಸಾಧ್ಯ.

## 6. ಮಹಿಳಾ ಮೀಸಲಾತಿ ನೈಜ ಪರಿಹಾರದ ನಿರೀಕ್ಷೆ

ಮಹಿಳೆಯರು ವಿಶ್ವ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಪಾಲು ಹೊಂದಿದ್ದಾರೆ. ಜತೆಗೆ ಒಟ್ಟು ಜಾಗತಿಕ ಮತದಾರರ ಅರ್ಧಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿದ್ದಾರೆ. ಅದಾಗ್ಯೂ ವಿಶ್ವದ ಶಾಸನಸಭೆಗಳಲ್ಲಿ ಇವರ ಪ್ರಾತಿನಿಧ್ಯ ನಗಣ್ಯ. 2008ರಲ್ಲಿ ವಿಶ್ವದ ವಿವಿಧ ರಾಷ್ಟ್ರಗಳ ಪಾರ್ಲಿಮೆಂಟ್‌ಗಳಲ್ಲಿ ಮಹಿಳಾ ಪ್ರಾತಿನಿಧ್ಯ ಸರಾಸರಿ ಶೇಕಡ 18ರಷ್ಟಿತ್ತು. ಆದರೆ ಭಾರತ ಈ ಅಸಮತೋಲನವನ್ನು ಸರಿಪಡಿಸಲು ಇದುವರೆಗೂ ಗಂಭೀರ ಪ್ರಯತ್ನಗಳನ್ನು ಮಾಡಿಲ್ಲ. ಭಾರತದಲ್ಲಿ ಸದ್ಯಕ್ಕೆ ಸಂಸತ್ತಿನಲ್ಲಿ ಕೇವಲ ಶೇಕಡ 8ರಷ್ಟು ಮಹಿಳಾ ಪ್ರಾತಿನಿಧ್ಯವಿದೆ. ಮಹಿಳೆಯರಿಗೆ ಮತದಾನದ ಹಕ್ಕನ್ನು ಮಂಜೂರು ಮಾಡಿದ ಮೊದಲ ಪ್ರಜಾಸತ್ತಾತ್ಮಕ ದೇಶ ಭಾರತ. ಆದರೆ ಇಲ್ಲಿ ಶಾಸನಬದ್ಧ ಸ್ಥಾನಗಳಿಗೆ ಮಹಿಳೆಯರ ಪ್ರಾತಿನಿಧ್ಯ ತೀರಾ ಕಡಿಮೆ ಮತ್ತು ರಾಷ್ಟ್ರೀಯ ಕಾನೂನುಗಳನ್ನು ರೂಪಿಸುವಲ್ಲೂ ಇವರ ಪಾತ್ರ ಸೀಮಿತವಾಗಿದೆ.

ದೇಶದಲ್ಲಿ ಮಹಿಳಾ ಮೀಸಲಾತಿ ಮಸೂದೆ ಸಿದ್ಧವಾಗಿ ಹನ್ನೆರಡು ವರ್ಷಗಳ ಬಳಿಕವೂ ಇನ್ನೂ ಚರ್ಚೆಯ ಹಂತದಲ್ಲೇ ಇದೆ. ರಾಷ್ಟ್ರಮಟ್ಟದಲ್ಲಿ ಕೋಲಾಹಲ ಮತ್ತು ಬಿಸಿ ಬಿಸಿ ಚರ್ಚೆಗಳಿಗೆ ಕಾರಣವಾಗಿದ್ದ ಮಸೂದೆ ಕೊನೆಗೂ 2008ರ ಬಜೆಟ್ ಅಧಿವೇಶನದ ವೇಳೆ ರಾಜ್ಯಸಭೆಯಲ್ಲಿ ಮಂಡನೆಯಾಯಿತು. ಇದು ಸಂವಿಧಾನ ತಿದ್ದುಪಡಿ ಮಸೂದೆಯಾಗಿರುವುದರಿಂದ. ಸಂಸತ್ತಿನ ಒಪ್ಪಿಗೆ ಪಡೆಯಲು ಮೂರನೇ ಎರಡರಷ್ಟು ಬಹುಮತ ಸಾಧಿಸಬೇಕು. 2010ರ ಮೇ ತಿಂಗಳಲ್ಲಿ ಈ ವಿವಾದಾತ್ಮಕ ಮತ್ತು ಐತಿಹಾಸಿಕ ಮಹಿಳಾ ಮೀಸಲಾತಿ ಮಸೂದೆಯನ್ನು ರಾಜ್ಯಸಭೆ ಅಂಗೀಕರಿಸಿತು. ಪಾರ್ಲಿಮೆಂಟ್ ಮತ್ತು ಎಲ್ಲ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ನೀಡುವ ಈ ಮಸೂದೆಗೆ ರಾಜ್ಯಸಭೆ ಎರಡು ದಿನಗಳ ನಾಟಕೀಯ ಬೆಳವಣಿಗೆಗಳು ಮತ್ತು ಅಡ್ಡಿ ಆತಂಕಗಳನ್ನು ಎದುರಿಸಿದ ಬಳಿಕ ಅಂಗೀಕರಿಸಿತು.

ಮಹಿಳಾ ಮೀಸಲಾತಿಯ ಪರವಾದ ವಾದದ ಪ್ರಮುಖ ಅಂಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

* ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಅರ್ಧದಷ್ಟು ಪಾಲು ಹೊಂದಿದ್ದಾರೆ. ಆದ್ದರಿಂದ ಅರ್ಧದಷ್ಟು ಶಾಸನಸಭೆ ಸ್ಥಾನಗಳಿಗೆ ಅವರು ಅರ್ಹರಾಗಿದ್ದಾರೆ. ಏಕೆಂದರೆ ಸಂಸತ್ತಿನಲ್ಲಿ ನಡೆಯುವ ಚರ್ಚೆಗಳು ಅವರ ಜೀವನದ ಮೇಲೆ ನೇರ ಪರಿಣಾಮ ಬೀರುವುದರಿಂದ ಅವರಿಗೆ ನ್ಯಾಯಬದ್ಧ ಪ್ರಾತಿನಿಧ್ಯ ಸಿಗಬೇಕು.

* ಮಹಿಳೆಯರಿಗೆ ವಿಭಿನ್ನವಾದ ಸಾಮಾಜಿಕ ಹಾಗೂ ಜೈವಿಕ ಅನುಭವಗಳಿದ್ದು, ಇವು ಆಡಳಿತ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಪಡೆಯಬೇಕು.

* ಮಹಿಳೆಯರು ಹಾಗೂ ಪುರುಷರು ಆಂಶಿಕವಾಗಿ ಸಂಘರ್ಷಾತ್ಮಕ ಆಸಕ್ತಿಗಳನ್ನು ಹೊಂದಿದ್ದಾರೆ.

* ಮಹಿಳೆಯರು ಅಧಿಕಾರದ ಸ್ಥಾನಕ್ಕೆ ಬಂದಾಗ ಇದು ಮತ್ತಷ್ಟು ಮಹಿಳೆಯರು ಆ ಹುದ್ದೆಗೆ ಏರಲು ಪ್ರೇರಣೆ ನೀಡುತ್ತದೆ. ಇಂಥ ಪ್ರಭಾವಿ ಮತ್ತು ನೀತಿನಿರೂಪಣಾ ಪಾತ್ರವನ್ನು ನಿರ್ವಹಿಸಲು ಇದು ಉತ್ತೇಜನ ನೀಡುತ್ತದೆ.

ಇತರೆಲ್ಲ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ಬಹುತೇಕ ಸಮಾನ ನಿಲುವು ಪ್ರದರ್ಶಿಸಿದರೂ, ಕಮ್ಯುನಿಸ್ಟ್ ಪಾರ್ಟಿಗಳು ವಿಶ್ವಾದ್ಯಂತ ಇಂಥ ಬೆಳವಣಿಗೆಗಳನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಇಂದಿಗೂ ಇವು ಮಹಿಳೆಯರನ್ನು ತೀರಾ ಕೆಳಹಂತದ ಕೆಲಸಗಾರರಾಗಿಯೇ ಪರಿಗಣಿಸಿವೆ. ಜತೆಗೆ ಈ ಪಕ್ಷಗಳ ಪಾಲಿಟ್‌ಬ್ಯೂರೊಗಳಲ್ಲಿ ಪುರುಷರ ಪ್ರಾಧಾನ್ಯವೇ ಎದ್ದುಕಾಣುತ್ತಿದೆ. ಜತೆಗೆ ಮಹಿಳೆಯರು ಉನ್ನತ ಹುದ್ದೆಗಳನ್ನು ಅಲಂಕರಿಸಿದರೆ,

ಅವರ ಕುಟುಂಬದ ಹಿನ್ನೆಲೆಯಿಂದಾಗಿ ಅವರು ಆ ಸ್ಥಾನಕ್ಕೆ ಏರಿರುತ್ತಾರೆ, ಉದಾಹರಣೆಗೆ ಇವರು ಪ್ರಭಾವಿ ರಾಜಕಾರಣಿಗಳ ಪತ್ನಿಯಾಗಿ, ಮಗಳಾಗಿ, ಸೊಸೆಯಾಗಿ ಅಥವಾ ಸೋದರ ಸಂಬಂಧಿಯಾಗಿ ಈ ಹುದ್ದೆಗೆ ಏರಿರುತ್ತಾರೆ. ಆದರೆ ಮಾಯಾವತಿ, ಮಮತಾ ಬ್ಯಾನರ್ಜಿಯಂಥವರು ಮಾತ್ರ ಇದಕ್ಕೆ ಅಪವಾದ. ಇವರು ಯಾವುದೇ ಕೌಟುಂಬಿಕ ರಾಜಕೀಯದ ಹಿನ್ನೆಲೆ ಇಲ್ಲದೆಯೂ ರಾಜಕೀಯದಲ್ಲಿ ಉನ್ನತ ಸ್ಥಾನ ಅಲಂಕರಿಸುವುದು ಸಾಧ್ಯವಾಗಿದೆ. ಅದು ಅವರ ಅಸಾಮಾನ್ಯ ಗುಣಗಳಿಂದಾಗಿ. ಇವರನ್ನು ಸಾಮಾನ್ಯ ಮಹಿಳೆಯರಿಗೆ ಉದಾಹರಣೆಯಾಗಿ ಪರಿಗಣಿಸಲಾಗದು. ಇವರ ಸಾಧನೆಗಳು ಅವರ ಜಾತಿಯ ಎಲ್ಲೆಯನ್ನು ಮೀರಿವೆ. ಉದಾಹರಣೆಗೆ ಮಾಯಾವತಿ ದಲಿತ ಕುಟುಂಬದಿಂದ ಬಂದವರಾದರೆ, ಬ್ಯಾನರ್ಜಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು.

ಲಿಂಗ ತಾರತಮ್ಯವನ್ನು ನಿವಾರಿಸಲು ಮತ್ತು ಮಹಿಳಾ ಸಬಲೀಕರಣವನ್ನು ಉತ್ತೇಜಿಸಲು, ಮಹಿಳೆಯರಲ್ಲಿ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಗೃಹಕೃತ್ಯ, ಕೆಲಸದ ಸ್ಥಳ ಮತ್ತು ರಾಜಕೀಯ ವಲಯದಲ್ಲಿ ಇವರ ಪ್ರಾತಿನಿಧ್ಯ ಹೆಚ್ಚಬೇಕು. ಹೆಚ್ಚುವ ರಾಜಕೀಯ ಪ್ರಭಾವವು ಸಹಜವಾಗಿಯೇ ಮಹಿಳಾ ಸಮಾನತೆಯನ್ನು ಹೆಚ್ಚಿಸಲು ಅನುಕೂಲವಾಗುತ್ತವೆ. ಇದರಿಂದ


www.shikarat.com